ಇನ್ನಷ್ಟು ಸ್ಥಳೀಯ ಸುದ್ದಿಗಳು ಪುಟ 9 ರಲ್ಲಿ

ಕನ್ನಡಪ್ರಭ
ಸೋಮವಾರ 4.05.2026

ಗರಿಷ್ಠ 36°c | ಕನಿಷ್ಠ 23°c

ಸುದ್ದಿ ಸಿಂಚನ

ನಾಳೆ ಯುದ್ಧ -ಶಾಂತಿ ವ್ಯಂಗ್ಯಚಿತ್ರಕಲಾ ಪ್ರದರ್ಶನ

ಮೈಸೂರು: ವಿದ್ಯಾರಣ್ಯಪುರಂನ ಬ್ಯಾಂಟರ್ ಬಾಬು ಪಬ್ಲಿಕೇಷನ್ ವತಿಯಿಂದ ವಿಶ್ವವ್ಯಂಗ್ಯಚಿತ್ರಕಾರರ ದಿನಾಚರಣೆ ಅಂಗವಾಗಿ ಎಂ.ವಿ. ನಾಗೇಂದ್ರ ಬಾಬು ಅವರ ಯುದ್ಧ ಹಾಗೂ ಶಾಂತಿ ವ್ಯಂಗ್ಯ ಚಿತ್ರಕಲಾ ಪ್ರದರ್ಶನವನ್ನು ರಾಮಾನುಜರಸ್ತೆಯ ಮೈಸೂರು ಆರ್ಟ್ ಗ್ಯಾಲರಿಯಲ್ಲಿ ಮೇ 5 ರಂದು ಬೆಳಗ್ಗೆ 10.30ಕ್ಕೆ ಆಯೋಜಿಸಲಾಗಿದೆ. ಪ್ರಮತಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಚ್.ವಿ. ರಾಜೀವ್ ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಪ್ರಾಸ್ತಾವಿಕ ನುಡಿಗಳನ್ನಾಡುವರು. ಶಿಲ್ಪಕಲಾವಿದ ಎಲ್. ಶಿವಲಿಂಗಪ್ಪ ಅಧ್ಯಕ್ಷತೆ ವಹಿಸುವರು.

10ರಂದು ಬಸವ ಜಯಂತಿ

ಮೈಸೂರು: ಆಲನಹಳ್ಳಿಯ ಗಿರಿದರ್ಶಿನಿ ಬಡಾವಣೆ ಸುಸಂಘ ಬಸವ ಬಳಗವು ಮೇ 10 ರಂದು ಬೆಳಗ್ಗೆ 10.30ಕ್ಕೆ ಎಸ್.ಎನ್.ಎಸ್ ಶಾಲೆ ಆವರಣದಲ್ಲಿ ಬಸವ ಜಯಂತಿ ಕಾರ್ಯಕ್ರಮ ಆಯೋಜಿಸಿದೆ. ಕುದೇರು ಮಠದ ಶ್ರೀ ಗುರುಶಾಂತಸ್ವಾಮೀಜಿ ಸಾನ್ನಿಧ್ಯವಹಿಸುವರು. ಕುಂದೂರು ಮಠದ ಅಧ್ಯಕ್ಷ ಡಾ. ಶರತ್‌ಚಂದ್ರ ಸ್ವಾಮೀಜಿ ಅಧ್ಯಕ್ಷತೆ ವಹಿಸುವರು. ಸಾಹಿತಿ ಡಾ.ಎಸ್. ಶಿವರಾಜಪ್ಪ ಉಪನ್ಯಾಸ ನೀಡುವರು.

ವೀರಶೈವ ಅನಾಥಾಲಯಕ್ಕೆ ಅರ್ಹರಿಂದ ಅರ್ಜಿ ಆಹ್ವಾನ

ಮೈಸೂರು: ನಗರದ ರಾಮಾನುಜ ರಸ್ತೆಯ ವೀರಶೈವ ಅನಾಥಾಲಯ ಟ್ರಸ್ಟ್ ವತಿಯಿಂದ ನಡೆಯುತ್ತಿರುವ ವಿದ್ಯಾರ್ಥಿ ನಿಲಯದ 2026-27ನೇ ಶೈಕ್ಷಣಿಕ ಸಾಲಿನ ಪ್ರಥಮ ಹಾಗೂ ದ್ವಿತೀಯ ಪಿಯು ವ್ಯಾಸಂಗ ಮಾಡುವ ಶೇ. 50ಕ್ಕಿಂತ ಹೆಚ್ಚು ಅಂಕಗಳಿಸಿದ, ಆರ್ಥಿಕವಾಗಿ ಹಿಂದುಳಿದ ಗ್ರಾಮಾಂತರ ವೀರಶೈವ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದ್ದು, ಮೇ 15 ರವರೆಗೆ ಅರ್ಜಿ ನೀಡುತ್ತಿದ್ದು, ಭರ್ತಿ ಮಾಡಿದ ಅರ್ಜಿಯನ್ನು 15 ರೊಳಗೆ ಹಿಂದಿರುಗಿಸಬೇಕು. 17 ರಂದು ಬೆಳಗ್ಗೆ 10ಕ್ಕೆ ಸಂದರ್ಶನ ಇರುತ್ತದೆ ಎಂದು ಟ್ರಸ್ಟ್ ಕಾರ್ಯದರ್ಶಿ ತಿಳಿಸಿದ್ದಾರೆ.

ಹಜ್ ಸಮಿತಿಗೆ ಹಲವರು ಆಯ್ಕೆ


ಮೈಸೂರು: ಕರ್ನಾಟಕ ರಾಜ್ಯ ಹಜ್ ಕಮಿಟಿಯು ಮೈಸೂರು ಜಿಲ್ಲಾ ಹಜ್ ಸಂಚಾಲಕರ ಪಟ್ಟಿಯನ್ನು ಬಿಡುಗಡೆಗೊಳಿಸಿದೆ. ಪಟ್ಟಿಯಲ್ಲಿ ಹರ್ಷದ್‌ಅಹಮದ್, ಸಮಿಉಲ್ಲಾ (ಅಜ್ಜು), ಸೈಯದ್‌ಇಬ್ರಾಹಿಂ ಸಿದ್ದಿಖಿ, ಮುಮ್ತಾಜ್‌ಅಹಮದ್, ಅಸ್ಗರ್ ಪಾಷ, ಅಲ್‌ಹಜ್ ಹುಮಾಯುನ್ ಷರೀಫ್, ರೆಹಮಾನ್ ಖಾನ್, ಫಜಿಲ್ ಚಾಂದ್, ಕಲೀಂ, ಪ್ರೊ. ನಾಸೀರುದ್ದೀನ್ ಮತ್ತು ಮೊಹಮ್ಮದ್‌ಶರೀಫ್‌ಅವರು ಇದ್ದಾರೆ.

ಜೈನ್ ಸಂಘಟನೆಯಿಂದ ವಿದ್ಯಾದಾನ ಕಾರ್ಯಕ್ರಮ

ಮೈಸೂರು: ಭಾರತೀಯ ಜೈನ್ ಸಂಘಟನಾ ಮೈಸೂರು ಶಾಖೆ ವತಿಯಿಂದ ವಿದ್ಯಾದಾನ ಕಾರ್ಯಕ್ರಮವನ್ನು 11 ಮತ್ತು 12ನೇ ತರಗತಿ ಹಾಗೂ ಬಿಕಾಂ, ಬಿಬಿಎ, ಬಿಸಿಎ ತರಗತಿಯ 1, 2 ಮತ್ತು 3ನೇ ವರ್ಷದ ಪದವಿಯ ಹಳೇ ಪಠ್ಯಪುಸ್ತಕ ಸಂಗ್ರಹ ಮತ್ತು ವಿತರಣೆ ಆಯೋಜಿಸಿದೆ. ವಿದ್ಯಾರ್ಥಿಗಳಿಂದ ದೇಣಿಗೆ ಮೂಲಕ ಪಠ್ಯ ಪುಸ್ತಕಗಳನ್ನು ಸಂಗ್ರಹಿಸಲಾಗುತ್ತದೆ. ಆಸಕ್ತರು ಜೈನ್ ಸ್ಥಾನಕ ಭವನ, 3ನೇ ಕ್ರಾಸ್, ಮಹಾವೀರನಗರ, ಜೈನ ತೇರಾಪಂತ್‌ಸಭಾ ಭವನ, ರಂಗರಾವ್ ಅಂಡ್ ಸನ್ಸ್ ಅಗರಬತ್ತಿ ಪಕ್ಕ, ಎಂ.ಜಿ. ರಸ್ತೆ, ಆದೇಶ್ವರ ವಾಟಿಕಾ ಅಪಾರ್ಟ್ ಮೆಂಟ್, ಹಳೇ ಮೈಸೂರು ಡೈರಿ ಹತ್ತಿರ, ಸಿದ್ಧಾರ್ಥನಗರ ನೀಡಬಹುದು. ಹೆಚ್ಚಿನ ಮಾಹಿತಿಗೆ ಮೊ. 86180 51838, ಕೌಶಿಕ್ ಜೈನ್ ಮೊ. 79963 35666 ಸಂಪರ್ಕಿಸಬಹುದು.



ರೋಟರಿ ಮೈಸೂರು ಉತ್ತರ ವತಿಯಿಂದ ಕಾರ್ಮಿಕರ ದಿನಾಚರಣೆ ಪ್ರಯುಕ್ತ ಮೈಸೂರಿನಲ್ಲಿ ಆಟೋ ಚಾಲನೆ ಮಾಡಿ ಜೀವನ ಸಾಗಿಸುತ್ತಿರುವ ಮಹಿಳಾ ಆಟೋ ಚಾಲಕರನ್ನು ಸನ್ಮಾನಿಸಲಾಯಿತು. ಈ ವೇಳೆ ರೋಟರಿ ಉತ್ತರದ ಅಧ್ಯಕ್ಷರು, ಅತಿಥಿಗಳು ಪಾಲ್ಗೊಂಡಿದ್ದರು.



ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಕೆ. ಗಿರೀಶ್ ಅವರನ್ನು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಮಾಜಿ ಸಚಿವ ಎನ್. ಮಹೇಶ್, ನಗರ ಬಿಜೆಪಿ ಅಧ್ಯಕ್ಷ ಎಲ್. ನಾಗೇಂದ್ರ, ಮಾಜಿ ಉಪ ಮೇಯರ್‌ವಿ. ಶೈಲೇಂದ್ರ ಅಭಿನಂದಿಸಿದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ ಯಶಸ್ವಿ



ಮೈಸೂರು: ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಮತ್ತು ಇಲವಾಲದ ಶ್ರೀ ರಾಮ ವಿದ್ಯಾಕುಲ ಶಾಲೆಯ ಸಹಯೋಗದಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಯಶಸ್ವಿಯಾಗಿ ಜರುಗಿತು. ಈ ಶಿಬಿರದಲ್ಲಿ ಸಹಾಯಕ ಪ್ರಾಧ್ಯಾಪಕರಾದ ಡಾ.ಟಿ. ಸಂಧ್ಯಾ ಮತ್ತು ಡಾ. ಅರ್ಷಿಯಾ ಅಂಜುಮ್ ಅವರು, ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಉತ್ತಮ ಸೇವೆಯನ್ನು ಒದಗಿಸಿದರು. ಶಾಲೆಯ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿ ಶಿಬಿರದ ಪ್ರಯೋಜನ ಪಡೆದುಕೊಂಡರು. ಶಿಬಿರದಲ್ಲಿ ವಿವಿಧ ಚಿಕಿತ್ಸೆಗಳು ಮತ್ತು ಸೇವೆಗಳು ನೀಡಲಾಯಿತು. ಪ್ರಕೃತಿ ಚಿಕಿತ್ಸಾ ವಿಧಾನಗಳು, ಯೋಗ ಚಿಕಿತ್ಸಾ ಸಲಹೆಗಳು, ಆಹಾರ ನಿಯಮಗಳು (ಡೈಟ್ ಕೌನ್ಸಲಿಂಗ್), ಮಡ್ ಥೆರಪಿ, ಅಕ್ಯುಪಂಕ್ಚರ್‌ಹಾಗೂ ಜೀವನ ಶೈಲಿ ಪರಿವರ್ತನೆ ಕುರಿತ ಮಾರ್ಗದರ್ಶನ ನೀಡಲಾಯಿತು.

ಬೆಲೆ ಏರಿಕೆಯಿಂದ ಜನ ದಂಗೆ ಏಳುವ ಸನ್ನಿವೇಶ

ಬಿಜೆಪಿ ನಾಯಕರು ಹೇಳುವುದೊಂದು, ಮಾಡುವುದೊಂದು ಎಂಬಂತಾಗಿದೆ: ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಆರೋಪ

• **ಕನ್ನಡಪ್ರಭ ವಾರ್ತೆ** ಮೈಸೂರು

ಪಂಚ ರಾಜ್ಯಗಳ ಚುನಾವಣೆ ಮುಗಿಯುತ್ತಿದ್ದಂತೆಯೇ ಅನಿಲ, ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಸಿರುವ ಕೇಂದ್ರ ಸರ್ಕಾರದ ನಿರ್ಧಾರದಿಂದ ಜನರು ದಂಗೆಯೇಳುವ ಸನ್ನಿವೇಶ ನಿರ್ಮಾಣವಾಗಿದೆ ಎಂದು ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ ವಾಗ್ದಾಳಿ ನಡೆಸಿದರು.



ನಗರದ ಕಾಂಗ್ರೆಸ್ ಕಚೇರಿಯಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಂಚ ರಾಜ್ಯಗಳ ಚುನಾವಣೆ ಮುಗಿಯುತ್ತಿದ್ದಂತೆ ವಾಣಿಜ್ಯ ಸಿಲಿಂಡರ್‌ದರ ಹೆಚ್ಚಿಸಿರುವ ಕೇಂದ್ರ ಸರ್ಕಾರ ಜನ ಸಾಮಾನ್ಯರ ರಕ್ತ ಹೀರುತ್ತಿದೆ ಎಂದು ಅವರು ಆರೋಪಿಸಿದರು.

ಚುನಾವಣೆ ಮುಗಿಯುವ ತನಕವೂ ಪೆಟ್ರೋಲಿಯಂ ಸಚಿವರು ಗ್ಯಾಸ್, ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಹೆಚ್ಚು ಮಾಡುವುದಿಲ್ಲ ಎಂದು ಹೇಳುತ್ತಿದ್ದರು. ಆದರೆ ಪಂಚ ರಾಜ್ಯಗಳ ಚುನಾವಣೆ ಮುಗಿಯುತ್ತಿದ್ದಂತೆಯೇ ವಾಣಿಜ್ಯ ಗ್ಯಾಸ್ ಸಿಲಿಂಡರ್‌ಬೆಲೆ ಹೆಚ್ಚಳಗೊಳಿಸಿ, ತಾವು ಹೇಳುವುದು ಒಂದು ನಡೆದುಕೊಳ್ಳುವುದು ಇನ್ನೊಂದು ಎಂಬುದನ್ನುಮತ್ತೊಮ್ಮೆಸಾಬೀತುಪಡಿಸಿದ್ದಾರೆ ಎಂದರು.

ಬಿಜೆಪಿ ನಾಯಕರು ಯಾರಿಗೂ ಗೊತ್ತಾಗದಂತೆ ಮತ್ತು ಮಧ್ಯರಾತ್ರಿಯಲ್ಲಿ ಅಚ್ಚರಿಯಂತೆ ಶಾಕ್ ಕೊಡುವುದನ್ನು ಕರಗತ ಮಾಡಿಕೊಂಡಿದ್ದಾರೆ. ಸಾಮಾನ್ಯವಾಗಿ 20 ರಿಂದ 50 ರೂ. ಹೆಚ್ಚಿಸಲಾಗುತ್ತಿತ್ತು. ಆದರೆ ಒಂದೇ ಬಾರಿ 993 ರೂ. ಹೆಚ್ಚಿಸಿರುವುದು ದಾಖಲೆ. ಕಳೆದ ಜನವರಿ ತಿಂಗಳಿಂದ ಈ ಈತನಕ ಐದು ಬಾರಿ ಗ್ಯಾಸ್ ಬೆಲೆ ಹೆಚ್ಚಿಸಲಾಗಿದೆ.

ಐದು ಕೆಜಿ ಎಲ್.ಪಿ.ಜಿ ಸಿಲಿಂಡರ್‌ಬೆಲೆ ಹೆಚ್ಚಾಗಿದೆ. ಬಲ್ಕ್ ಡೀಸೆಲ್ ಬೆಲೆಯಲ್ಲಿ 149 ರೂ. ಹೆಚ್ಚಾದರೆ, ವಿಮಾ ನದ ಇಂಧನದ ಬೆಲೆಯೂ ಹೆಚ್ಚಾಗಿದೆ. ವಿದೇಶಗಳಿಗೆ ರಫ್ತು ಮಾಡುವ ತೈಲಗಳ ಬೆಲೆಯಲ್ಲಿ 23 ರೂ. ಕಡಿಮೆಗೊಳಿಸಲಾಗಿದೆ. ಡಾಲರ್‌ಮೌಲ್ಯ ಹೆಚ್ಚಾಗಿ ರುವ ಕಾರಣ ಕೇಂದ್ರ ಸರ್ಕಾರಕ್ಕೆ ನಷ್ಟ ಆಗುತ್ತಿದೆಯೇ ಎಂಬುದನ್ನು ಮೊದಲು ಹೇಳಬೇಕು.

ವಾಣಿಜ್ಯ ಸಿಲಿಂಡರ್ ಅನ್ನು 3,155 ರೂ.ಗೆ ಮಾರಿದರೆ ಮಾಲೀ ಕರು ಎಲ್ಲಿಂದ ಹಣ ತರಬೇಕು ಎಂದು ಅವರು ಪ್ರಶ್ನಿಸಿದರು. ಸಚಿವರಾದ ಶೋಭಾ ಕರಂದಾಜ್ಲೆ, ಪ್ರಹ್ಲಾದ್ ಜೋಷಿ, ತೇಜಸ್ವಿ ಸೂರ್ಯ ಮಾತನಾಡು ತ್ತಿಲ್ಲ.

ಒಂದು ಹೆಣ ಬಿದ್ದರೆ ಲಬೋ ಲಬೋ ಎನ್ನುತ್ತಿದ್ದ ನಾಯಕರು ಈಗ ಬಾಯಿ ಬಿಡುತ್ತಿಲ್ಲ ಎಂದರು. ಮೈಸೂರು-ಹೈದ್ರಾಬಾದ್ ನಡುವೆ ಹೊಸದಾಗಿ ವಿಮಾನ ಆರಂಭವಾಗಿಲ್ಲ. ಈ ಹಿಂದೆ ನಿಂತು ಹೋಗಿದ್ದನ್ನು ಮತ್ತೆ ಶುರು ಮಾಡಲಾಗಿದೆ.

ವಿಮಾನ ನಿಲ್ದಾಣ ರನ್ ವೇ ಕಾಮಗಾರಿ ಆರಂಭಿಸಲು ಎನ್.ಎಚ್ ಸ್ಥಳಾಂತರದ ಕಡೆ ಸಂಸದರು ಗಮನ ನೀಡ ಬೇಕು ಎಂದು ಅವರು ಒತ್ತಾಯಿಸಿದರು. ಮೈಸೂರು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್. ಮೂರ್ತಿ, ಪ್ರಧಾನ ಕಾರ್ಯದರ್ಶಿ ಎಂ. ಶಿವಣ್ಣ, ವಕ್ತಾರ ಕೆ. ಮಹೇಶ್ ಇದ್ದರು.

ದಿಕ್ಕು ತಪ್ಪಿಸುವ ಕೆಲಸ

ಡಾಲರ್‌ಮೌಲ್ಯ ಹೆಚ್ಚಳದಿಂದ ಬರಬೇಕಾದ ಆದಾಯ ಕಡಿಮೆ ಆಗಿದೆಯೇ ಹೊರತು ನಷ್ಟವಾಗಿಲ್ಲ. ನಷ್ಟದ ವಿಚಾರಗಳ ಬಗ್ಗೆ ಜನರಲ್ಲಿ ದಿಕ್ಕುತಪ್ಪಿಸುವ ಕೆಲಸವಾಗಿದೆ.

ಬಡವರ ರಕ್ತ ಹೀರುತ್ತಿರುವ ಬಿಜೆಪಿ ಸರ್ಕಾರಕ್ಕೆ ಧಿಕ್ಕಾರ ಹೇಳು ತ್ತೇವೆ. ಒಂದೆರಡು ರೂ. ಹೆಚ್ಚಿಸಿದರೆ ಬಿಜೆಪಿ ಯವರು ಬಾಯಿ ಬಾಯಿ ಬಡಿದುಕೊಳ್ಳುತ್ತಿ ದ್ದಾರೆ. ಗ್ಯಾಸ್ ಬೆಲೆ ಏರಿಕೆಯಿಂದವಾಲೀಕರಿಗೆತೊಂದರೆಯಾದರೂ ಜನಸಾವಾನ್ಯರಿಗೆ ದೊಡ್ಡ ಹೊಡೆತ ಬಿದ್ದಿದೆ ಎಂದರು.

ಬಸವಣ್ಣನವರ ಚಿಂತನೆ ಇಂದು ಅತ್ಯವಶ್ಯಕ

ಜಯಂತಿ ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾಲಯದ ಕುಲಸಚಿವೆ ಎಂ.ಕೆ. ಸವಿತಾ

• **ಕನ್ನಡಪ್ರಭ ವಾರ್ತೆ** ಮೈಸೂರು

ಬಸವಣ್ಣ ಅವರ ಈ ಚಿಂತನೆಗಳು ಇಂದಿನ ಸಮಾನತೆ ಮತ್ತು ಮಹಿಳಾ ಸಬಲೀಕರಣದ ಮೂಲವಾಗಿದೆ ಎಂದು ಮೈಸೂರು ವಿವಿ ಕುಲಸಚಿವೆ ಎಂ.ಕೆ. ಸವಿತಾ ತಿಳಿಸಿದರು.

ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಶ್ರೀ ಬಸವೇಶ್ವರರ ಸಾಮಾಜಿಕ ಪರಿಷ್ಕರಣೆ, ಸಂಶೋಧನೆ, ಅಧ್ಯಯನ ಹಾಗೂ ವಿಸ್ತರಣೆ ಕೇಂದ್ರದ ವತಿಯಿಂದ ಇತ್ತೀಚೆಗೆ ಆಯೋಜಿಸಿದ್ದ ಬಸವ ಜಯಂತಿ ಹಾಗೂ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಬಸವಣ್ಣ ಮಹಿಳೆಯರಿಗೂ ಸಮಾನ ಹಕ್ಕುಗಳನ್ನು ನೀಡಬೇಕು ಎಂದು ನಂಬಿದ್ದರು. ಅವರು ಮಹಿಳೆಯರ ಶಿಕ್ಷಣ ಮತ್ತು ಸ್ವಾತಂತ್ರ್ಯವನ್ನು ಬೆಂಬಲಿಸಿದರು. ಇದು ಆ ಕಾಲದಲ್ಲಿ ಬಹಳ ದೊಡ್ಡ ಕ್ರಾಂತಿಯಾಗಿತ್ತು. ಇಂದಿನ ಸಮಾಜದಲ್ಲಿ ನಾವು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಬಹಳ ಅಭಿವೃದ್ಧಿ ಸಾಧಿಸಿದ್ದೇವೆ. ಆದರೆ ಇನ್ನೂ ಕೆಲವು ಕಡೆಗಳಲ್ಲಿ ಅಸಮಾನತೆ, ಅನ್ಯಾಯ ಮತ್ತು ಅಂಧ ಶ್ರದ್ಧೆ ಕಂಡುಬರುತ್ತವೆ.



ಮಾನಸ ಗಂಗೋತ್ರಿ, ಬಸವ ಅಧ್ಯಯನ ಕೇಂದ್ರದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮೈಸೂರು ವಿವಿ ಕುಲಸಚಿವೆ ಎಂ.ಕೆ. ಸವಿತಾ ಅವರು ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದರು.

ಇಂತಹ ಸಂದರ್ಭಗಳಲ್ಲಿ ಬಸವಣ್ಣ ಅವರ ತತ್ವಗಳು ನಮಗೆ ದಾರಿ ತೋರಿಸುತ್ತವೆ. ಅವರ ಸಂದೇಶಗಳು ಇಂದಿಗೂ ಪ್ರಸ್ತುತವಾಗಿವೆ ಎಂದರು.

ಸತ್ಯ, ಧರ್ಮ, ಪ್ರೀತಿ, ಶಾಂತಿ ಮತ್ತು ಸಮಾನತೆಯನ್ನು ಸಾರುವ ವಚನಗಳು ಇಂದಿಗೂ ಜನರಿಗೆ ಮಾರ್ಗದರ್ಶನ ನೀಡುತ್ತಿವೆ. ಬಸವಣ್ಣ ಅವರು ತಮ್ಮ ವಿಚಾರಗಳನ್ನು ವಚನಗಳು ಎಂಬ ಕಾವ್ಯ ರೂಪದಲ್ಲಿ ಜನರಿಗೆ ತಲುಪಿಸಿದರು. ಈ ವಚನಗಳು ಸರಳವಾದ ಭಾಷೆಯಲ್ಲಿ ಇದ್ದರೂ, ಅವುಗಳಲ್ಲಿ ಆಳವಾದ ಅರ್ಥ ಮತ್ತು ಜೀವನದ ಮಹತ್ವದ ಪಾಠಗಳಿವೆ ಎಂದು ಅವರು ಹೇಳಿದರು.

ಬಸವಣ್ಣ ಸ್ಥಾಪಿಸಿದ ಅನುಭವ ಮಂಟಪವನ್ನು ವಿಶ್ವದ ಮೊದಲ ಪ್ರಜಾಪ್ರಭುತ್ವ ಸಭೆ ಎನ್ನಲಾಗುತ್ತದೆ. ಇಲ್ಲಿ ಎಲ್ಲ ವರ್ಗದ ಜನರು, ಮಹಿಳೆಯರು ಮತ್ತು ಹಿಂದುಳಿದ ವರ್ಗದವರು ಕೂಡ ತಮ್ಮ ಅಭಿಪ್ರಾಯ ಮುಕ್ತವಾಗಿ ಹಂಚಿಕೊಳ್ಳುತ್ತಿದ್ದರು. ಇದು ಸಮಾನತೆಗೆ ಉತ್ತಮ ಉದಾಹರಣೆಯಾಗಿದೆ. ಈ ಸಭೆಯ ಮೂಲಕ ಬಸವಣ್ಣಸಮಾಜದಲ್ಲಿ ಜಾಗೃತಿ ಮೂಡಿಸಿದ್ದಾಗಿ ತಿಳಿಸಿದರು. ಪ್ರಸ್ತುತ ದೇಶವು ಸುಭೀಕ್ಷೆಯಿಂದಿರಲು ಬಸವಣ್ಣ ಅವರು ನೀಡಿದ ಕೊಡುಗೆಗಳೇ ಕಾರಣವಾಗಿವೆ. ಸರ್ವರನ್ನೂ ಸಮಾನರನ್ನಾಗಿ ಕಾಣುವ ಎಲ್ಲರನ್ನೂ ಒಳಗೊಂಡು ಸಮಾಜದ ಇತಕ್ಕಾಗಿ ಬದುಕುವ ಅವರ ಸಂದೇಶ ಹಲವು ಸಾಮಾಜಿಕ ಸಮಸ್ಯೆ ಗಳಿಗೆ ಪರಿಹಾರವಾಗಿ ನಿಲ್ಲಲಿದೆ ಎಂದರು.

ನಗರ ಪ್ರದೇಶಗಳಲ್ಲಿ ಅಂತರ್ಜಾತಿ ವಿವಾಹಗಳ ಸಂಖ್ಯೆ ಹೆಚ್ಚುತ್ತಿದೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ ಜಾತಿ ಆಧಾರಿತ ವಿರೋಧ, ಕುಟುಂಬದ ಒತ್ತಡ ಮತ್ತು ಸಾಮಾಜಿಕ ಬಹಿಷ್ಕಾರದ ಸಮಸ್ಯೆಗಳು ಕಾಣುತ್ತವೆ. ಕೆಲವು ಸಂದರ್ಭಗಳಲ್ಲಿ ಮರ್ಯಾದೆ ಹತ್ಯೆಯಂತಹ ಪ್ರಕರಣಗಳು ನಡೆಯುತ್ತಿವೆ ಎಂದು ವಿಷಾದಿಸಿದರು. ಕಾರ್ಯಕ್ರಮದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ, ಕೇಂದ್ರದ ಸಂದರ್ಶಕ ಪ್ರಾಧ್ಯಾಪಕ ಕೆ. ಕೇಶವನ್ ಪ್ರಸಾದ್ ಮೊದಲಾದವರು ಇದ್ದರು.

ಕನಸಿಗೆ ರೂಪ ಕೊಡುವುದೇ ಕಲೆ

ಕಲಾಸೌರಭ ತಂಡದ ಸಂಸ್ಥಾಪಕ ಗಾಯಕಿ ನಾಗರತ್ನ ವಾರ್ಷಿಕೋತ್ಸವ ಅಂಗವಾಗಿ ಗಾಯನ ಕಾರ್ಯಕ್ರಮ



ಕಲಾಸೌರಭ ತಂಡದ ಸಂಸ್ಥಾಪಕಿ ನಾಗರತ್ನ ಸಂಸ್ಥೆ ವಾರ್ಷಿಕೋತ್ಸವ ವನ್ನು ಉದ್ಘಾಟಿಸಿದರು. ಗಾಯಕರಾದ ಜೂ.ರಾಜ್‌ಕುಮಾರ್, ಕೃಷ್ಣಪ್ರಸಾದ್, ನಾಗೇಶ್, ಜಯರಾಂ, ದಿನೇಶ್, ನರಸಿಂಹನ್, ಮಂಗಳ, ನಾಗರತ್ನ, ನಾಗಮ್ಮ, ಕೃಷ್ಣವೇಣಿ, ಚಂದ್ರಿಕ ಹಾಗೂ ಮಲ್ಲಿಕ ಇದ್ದಾರೆ.

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಕಲಾಸೌರಭ ತಂಡದ ವತಿಯಿಂದ 6ನೇ ವರ್ಷದ ವಾರ್ಷಿಕೋತ್ಸವ ಅಂಗವಾಗಿ ಕೃಷ್ಣಮೂರ್ತಿಪುರಂನ ಶಾರದಾ ವಿಲಾಸ ಶತಮಾನೋತ್ಸವದಲ್ಲಿ ಕರೋಕೆ ಗಾಯನ ಕಾರ್ಯಕ್ರಮ ಶನಿವಾರ ಸಂಜೆ ನೆರವೇರಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕಲಾಸೌರಭ ತಂಡದ ಸಂಸ್ಥಾಪಕ ಗಾಯಕಿ ನಾಗರತ್ನ, ಕಲೆಯನ್ನು ಪ್ರೋತ್ಸಾಹಿಸಬೇಕು. ಕನಸುಗಳಿಗೆ ರೂಪ ಕೊಡುವುದೇ ಕಲೆ. ಪ್ರತಿಭೆ ಯನ್ನು ಹೊರ ಹಾಕಲು ಇಂತಹ ಗಾಯನ ಕಾರ್ಯಕ್ರಮ ಅತ್ಯಂತ ಅವಶ್ಯಕ. ಆದ್ದರಿಂದ ಗಾಯಕರು ವೇದಿಕೆಯಲ್ಲಿ ಬಂದು ಹಾಡುವುದರ ಮೂಲಕ ಮತ್ತಷ್ಟು ಕಲೆ ಪ್ರೋತ್ಸಾಹಿಸ ಬೇಕು ಎಂದು ತಿಳಿಸಿದರು. ನಾವೆಲ್ಲರು ಜೀವ ವಿಮಾ ನಿಗಮದ ಸಿಬ್ಬಂದಿ ಬಿಡುವಿನ ವೇಳೆ ಹಾಡುಗಳನ್ನು ಕಲಿತು ಪ್ರೇಕ್ಷಕರಿಗೆ ಪ್ರತಿವರ್ಷವು ಗಾಯ ನಗಳ ಮೂಲಕ ಪ್ರಸ್ತುತ ಪಡಿಸುತ್ತಿದ್ದೇವೆ. ಕಾರ್ಯಕ್ರಮದಲ್ಲಿ ಗಾಯಕರಾದ ಜೂನಿಯರ್‌ರಾಜ್ ಕುಮಾರ್, ಕೃಷ್ಣಪ್ರಸಾದ್, ನಾಗೇಶ್, ಜಯರಾಂ, ದಿನೇಶ್, ನರಸಿಂಹನ್, ಮಂಗಳಾ, ನಾಗರತ್ನಾ, ನಾಗಮ್ಮ, ಕೃಷ್ಣವೇಣಿ, ಚಂದ್ರಿಕಾ ಹಾಗೂ ಮಲ್ಲಿಕಾ ಇದ್ದರು.

ಡೌನ್ ಸಿಂಡ್ರೋಮ್ ವಿದ್ಯಾರ್ಥಿನಿ ಎಸ್ಸೆಸ್ಸೆಲ್ಸಿಯಲ್ಲಿ ಉತ್ತೀರ್ಣ

• **ಕನ್ನಡಪ್ರಭ ವಾರ್ತೆ** ಮೈಸೂರು



ಮೈತ್ರಿ ವಿಶೇಷ ಮಕ್ಕಳ ಶಾಲೆಯ 17 ವರ್ಷದ ವಿದ್ಯಾರ್ಥಿನಿ ಎಸ್. ದಿಶಾ ಅವರು ಡೌನ್ ಸಿಂಡೋಮ್ ಮತ್ತು ಶೇ. 75 ಅಂಗವೈಕಲ್ಯ ಹೊಂದಿದ್ದರೂ, ಎಸ್ಸೆಸ್ಸೆಲ್ಸಿ (ಮಾಧ್ಯಮಿಕ ಶಾಲಾ ಪ್ರಮಾಣಪತ್ರ) ಪರೀಕ್ಷೆಯಲ್ಲಿ ಯಶಸ್ವಿಯಾಗಿ ಉತ್ತೀರ್ಣರಾಗಿದ್ದು, ಸಮಾವೇಶಾತ್ಮಕ ಶಿಕ್ಷಣದಲ್ಲಿ ಪ್ರೇರಣಾದಾಯಕ ಮೈಲುಗಲ್ಲು ಸಾಧಿಸಿದ್ದಾರೆ.

ಈ ವಿದ್ಯಾರ್ಥಿನಿ ಶಂಕರ್‌ನಾಯಕ್ ಹಾಗೂ ಲತಾ ಬೈ ಅವರ ಪುತ್ರಿಯಾಗಿದ್ದು, ತನ್ನ ಪರಿಶ್ರಮ ಮತ್ತು ದೃಢಸಂಕಲ್ಪದ ಮೂಲಕ ಇದನ್ನು ಸಾಧ್ಯವಾಗಿಸಿದ್ದಾರೆ. ವಿದ್ಯಾರ್ಥಿನಿಯ ಯಶಸ್ಸಿಗೆ ಪೋಷಕರ ನಿರಂತರ ಬೆಂಬಲ ಹಾಗೂ ಶಿಕ್ಷಕರ ಸಮರ್ಪಿತ ಮಾರ್ಗದರ್ಶನ ಪ್ರಮುಖ ಕಾರಣವಾಗಿದೆ ಎಂದು ಶಾಲಾ ಆಡಳಿತ ಮಂಡಳಿ ತಿಳಿಸಿದೆ. ಶಾಲೆಯ ಶಿಕ್ಷಕಿ ಲತಾಬಾಯಿ ಅವರ ವಿಶೇಷ ಮಾರ್ಗದರ್ಶನ ಮತ್ತು ಸಹಕಾರವೂ ವಿದ್ಯಾರ್ಥಿನಿಯ ಸಾಧನೆಗೆ ಮಹತ್ವದ ಪಾತ್ರವಹಿಸಿದೆ.

ಇದು ನಮ್ಮೆಲ್ಲರಿಗೂ ಹೆಮ್ಮೆಯ ಕ್ಷಣ. ಸರಿಯಾದ ಮಾರ್ಗದರ್ಶನ, ಸಹನೆ ಮತ್ತು ಸಮಾವೇಶಾತ್ಮಕ ಶಿಕ್ಷಣದ ಮೂಲಕ ಪ್ರತಿಯೊಬ್ಬ ಮಗುವಿಗೂ ಸಾಧನೆ ಮಾಡುವ ಸಾಮರ್ಥ್ಯ ಇದೆ ಎಂಬುದನ್ನು ಇದು ಮತ್ತೊಮ್ಮೆ ಸಾಬೀತುಪಡಿಸಿದೆ ಎಂದು ಶಾಲಾ ಆಡಳಿತ ಮಂಡಳಿ ತಿಳಿಸಿದೆ.

ಈ ಸಾಧನೆ ವಿಶೇಷ ಅಗತ್ಯಗಳಿರುವ ಮಕ್ಕಳಿಗೆ ಸಮಾನ ಶಿಕ್ಷಣಾವಕಾಶಗಳನ್ನು ಒದಗಿಸುವತ್ತ ಮಹತ್ವದ ಹೆಜ್ಜೆಯಾಗಿ ಪರಿಗಣಿಸಲಾಗುತ್ತಿದೆ.

ಅತಿಥಿ ಉಪನ್ಯಾಸಕರ ನೇಮಕಾತಿಗೆ ಅರ್ಜಿ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು 2026-27 ನೇ ಶೈಕ್ಷಣಿಕ ಸಾಲಿಗೆ ವಿವಿಧ ವಿಷಯಗಳಲ್ಲಿ ಬೋಧನೆ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅತಿಥಿ ಉಪನ್ಯಾಸಕರು ಹಾಗೂ ಸಂಪನ್ಮೂಲ ವ್ಯಕ್ತಿಗಳ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆದೇಶದನ್ವಯ ನಿಗದಿಪಡಿಸಿರುವ ಗೌರವ ಸಂಭಾವನೆ ಹಾಗೂ ಷರತ್ತುಗಳ ಆಧಾರದ ಮೇಲೆ ಈ ನೇಮಕಾತಿ ನಡೆಯಲಿದೆ. ಅನ್ವಯಕಲೆ, ಚಿತ್ರಕಲೆ, ಶಿಲ್ಪಕಲೆ, ಅಚ್ಚುಕಲೆ (ಗ್ರಾಫಿಕ್ಸ್), ಛಾಯಾಚಿತ್ರ ಮತ್ತು ಛಾಯಾಚಿತ್ರ ಪತ್ರಿಕೋದ್ಯಮ, ಕಲಾ ಇತಿಹಾಸ, ಕನ್ನಡ, ಇಂಗ್ಲಿಷ್, ಹಿಂದಿ, ಭಾರತ ಮತ್ತು ಭಾರತೀಯ ಸಂವಿಧಾನ ಹಾಗೂ ಸಂವಿಧಾನದ ಮೌಲ್ಯಗಳು, ಪರಿಸರ ಅಧ್ಯಯನ ವಿಷಯಗಳಾಗಿವೆ.

ಮೇ 15ರ ಸಂಜೆ 5.30ರೊಳಗೆ ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದ್ದು, ಮೇ 19 ರಂದು ಬೆಳಗ್ಗೆ 11ಕ್ಕೆ ಸಂದರ್ಶನ ನಡೆಯಲಿದೆ. ಅಂತರ್ಜಾಲ ವಿಳಾಸ www.mysore.nic.in ಮತ್ತು www.cavamysore.karnataka.gov.in ಅಂತರ್ಜಾಲದ ಮೂಲಕ ಮಾಹಿತಿ ಪಡೆಯಬಹುದು. ಹೆಚ್ಚಿನ ಮಾಹಿತಿಗೆ ಕಾರ್ಯಾಲಯದ ದೂ.0821-2438931 ನ್ನು ಸಂಪರ್ಕಿಸಬಹುದು ಎಂದು ಕಾವಾ ಡೀನ್ ತಿಳಿಸಿದ್ದಾರೆ.

ಮಾರ್ಗದರ್ಶನ | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕೆ.ಎಸ್. ರಾಘವೇಂದ್ರ

ವೃತ್ತಿ ಆಧಾರಿತ ತರಬೇತಿ ಉದ್ಯೋಗಕ್ಕೆ ಕೀಲಿ ಕೈ

• **ಕನ್ನಡಪ್ರಭ ವಾರ್ತೆ** ಮೈಸೂರು

ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಉದ್ಯೋಗಾವಕಾಶ ಪಡೆಯಲು ವೃತ್ತಿ ಆಧಾರಿತ ತರಬೇತಿ ಅತ್ಯಂತ ಅಗತ್ಯ ಎಂದು ಮೈಸೂರು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕೆ. ಎಸ್. ರಾಘವೇಂದ್ರ ಹೇಳಿದರು.

ನಗರದ ಚಾಮರಾಜ ಜೋಡಿ ರಸ್ತೆಯ ಸಮರ್ಥನಂ ಅಂಗವಿಕಲರ ಸಂಸ್ಥೆಯ ಜೀವನೋಪಾಯ ಸಂಪನ್ಮೂಲ ಕೇಂದ್ರದಲ್ಲಿ 2026-27ನೇ ಸಾಲಿನಲ್ಲಿ ಉಚಿತ ಕಂಪ್ಯೂಟರ್‌ತರಬೇತಿ ಪಡೆಯುತ್ತಿರುವ ಪ್ರಥಮ ಬ್ಯಾಚಿನ ಪ್ರಶಿಕ್ಷಣಾರ್ಥಿಗಳಿಗೆಸ್ವಾಗತಕಿಟ್ ವಿತರಣಾಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಂಪ್ಯೂಟರ್‌ಶಿಕ್ಷಣವು ಇಂದಿನ ಕಾಲದಲ್ಲಿ ಅನಿವಾರ್ಯವಾಗಿದ್ದು, ಅದನ್ನು ಅಳವಡಿಸಿಕೊಂಡವರು ಉತ್ತಮ ಉದ್ಯೋಗಾವಕಾಶ ಗಳಿಸಬಹುದು. ಮಹಿಳೆಯ ಸರ್ವಾಂಗೀಣ ಅಭಿವೃದ್ಧಿಗೆ ಕಂಪ್ಯೂಟರ್‌ತರಬೇತಿ ಪೂರಕವಾಗಿದ್ದು, ಆರ್ಥಿಕ ಸ್ವಾವಲಂಬನೆಗೆ ದಾರಿಯಾಗುತ್ತದೆ. ಈ ರೀತಿಯ ಉಚಿತ ತರಬೇತಿ ಕಾರ್ಯಕ್ರಮಗಳು ಮಹಿಳೆಯರ ಭವಿಷ್ಯ ಬಲಪಡಿಸಲು ಮಹತ್ವದ ಪಾತ್ರವಹಿಸುತ್ತಿವೆ ಎಂದು ಅವರು ಹೇಳಿದರು.

ನಮ್ಮ ಕಾಲದಲ್ಲಿ ಮಾಹಿತಿ ಕೊರತೆ ಹಾಗೂ ಅವಕಾಶಗಳ ಅಭಾವ ಇತ್ತು. ಆದರೆಇಂದಿನ ಪೀಳಿಗೆಗೆ ಅಪಾರ ಅವಕಾಶಗಳಿವೆ. ಅವುಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವುದು ಮುಖ್ಯ ಎಂದು ಹೇಳಿದರು.



ಪ್ರತಿಯೊಂದು ಕ್ಷಣವನ್ನು ಸದುಪಯೋಗಪಡಿಸಿಕೊಂಡು, ಕಲಿಕೆಗೆ ಹೆಚ್ಚಿನ ಆದ್ಯತೆನೀಡಬೇಕು. ಮಹಿಳೆಯರು ಈಗ ವಿವಿಧ ಕ್ಷೇತ್ರಗಳಲ್ಲಿ ಮುನ್ನಡೆಯುತ್ತಿದ್ದು, ತಮ್ಮ ಶ್ರಮ ಮತ್ತು ಕಲಿಕೆಯ ಮೂಲಕ ಸಾಧನೆ ಮಾಡುತ್ತಿದ್ದಾರೆ. ಆತ್ಮವಿಶ್ವಾಸದಿಂದ ಮುಂದೆ ಸಾಗಿದರೆ ಯಶಸ್ಸು ನಿಶ್ಚಿತ ಎಂದು ಅವರು ಅಭಿಪ್ರಾಯಪಟ್ಟರು.


ಸಂಸ್ಥೆಯ ಮೈಸೂರು ವಿಭಾಗದ ಮುಖ್ಯಸ್ಥ ಶಿವರಾಜು ಮಾತನಾಡಿ, ಆಧುನಿಕ ಯುಗದಲ್ಲಿ ಕಂಪ್ಯೂಟರ್ ಮಾನವ ಜೀವನದ ಅವಿಭಾಜ್ಯ ಅಂಗ. ಇದು ಕೇವಲ ಲೆಕ್ಕಾಚಾರ ಮಾಡುವ ಸಾಧನವಾಗಿ ಉಳಿಯದೆ, ಮಾಹಿತಿ ತಂತ್ರಜ್ಞಾನದ ಕ್ರಾಂತಿಗೆ ಕಾರಣವಾಗಿದೆ. ಶಿಕ್ಷಣ, ಬ್ಯಾಂಕಿಂಗ್, ವೈದ್ಯಕೀಯ ಮತ್ತು ಕಚೇರಿ ಕೆಲಸಗಳಲ್ಲಿ ಕಂಪ್ಯೂಟರ್ ಬಳಕೆಯಿಂದಾಗಿ ಕೆಲಸಗಳು ಅತ್ಯಂತ ವೇಗವಾಗಿ ಮತ್ತು ನಿಖರವಾಗಿ ನಡೆಯುತ್ತಿವೆ. ಇಂಟರ್ನೆಟ್ ಸೌಲಭ್ಯದೊಂದಿಗೆ ಕಂಪ್ಯೂಟರ್‌ಇಡೀ ಜಗತ್ತನ್ನೇ ಒಂದು ಪುಟ್ಟ ಹಳ್ಳಿಯನ್ನಾಗಿ ಮಾಡಿದೆ ಎಂದು ಅವರು ತಿಳಿಸಿದರು. ಸಂಸ್ಥೆಯ ಉದ್ಯೋಗಾಧಿಕಾರಿ ಆರ್.ಸುಬ್ರಮಣಿ, ಎನ್.ಮಾಂತೇಶ, ಎಸ್.ಪವನ್, ಶಿಕ್ಷಕರಾದ ಸ್ಪರ್ಶ, ಎಸ್.ಲತಾ, ರಜತ್, ಮನು, ಲಕ್ಷ್ಮಿ, ಹೇಮಲತಾ ಮೊದಲಾದವರು ಪಾಲ್ಗೊಂಡಿದ್ದರು.

ನಗರ ಕಾರ್ಯಕ್ರಮ
4.5.2026, ಸೋಮವಾರ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಆರೋಗ್ಯಾಯುಷ್ಯ ಆರೋಗ್ಯ ವರ್ಧಕ ಶಿಬಿರ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30 ರಿಂದ ಸಂಜೆ 4.30.
- **ರಾಮಸನ್ಸ್ ಬೊಂಬೆಮನೆ:** ಕ್ರೀಡಾ ಕೌಶಲ–ಹಾಸು ಆಟಗಳ ಪ್ರದರ್ಶನ, ಮಾರಾಟ, ನಜರಬಾದ್‌ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ ಸಂಜೆ 7.
- **ಆಯುಷ್ ಇಲಾಖೆ:** ಉಚಿತ ವೈಜ್ಞಾನಿಕ ಪ್ರಾಣಾಯಾಮ, ಥೆರಪಿ ಶಿಬಿರಗಳು, ಕೃಷ್ಣಮೂರ್ತಿಪುರಂ, ಶ್ರೀರಾಮಮಂದಿರ.
- **ಕಾವೇರಿ ಬಳಗ, ಹಿರಣ್ಮಯಿ ಪ್ರತಿಷ್ಠಾನ:** ಪ್ರತಿಭಾ ಪುರಸ್ಕಾರ, ಭಾಗವಹಿಸುವವರು– ಗೋಪಾಲಸ್ವಾಮಿ, ಕೆ. ರಘುರಾಂ ವಾಜಪೇಯಿ, ಪುರುಷೋತ್ತಮ್, ದೊಡ್ಡನಹುಂಡಿ ರಾಜಣ್ಣ, ರಾಮಾನುಜ ರಸ್ತೆ, ಶಿರಡಿ ಸಾಯಿಬಾಬಾ ಮಂದಿರ, ಬೆಳಗ್ಗೆ 10.30.

ಸಾಂಸ್ಕೃತಿಕ

- **ಸುರಭಿ ಗಾನಕಲಾಮಂದಿರ ಚಾರಿಟಬಲ್ ಟ್ರಸ್ಟ್:** ಸ್ವಾತಿ ತಿರುನಾಳ್ ಮಹಾರಾಜರ ಕೃಷ್ಣಪರ ರಚನೆಗಳ ಅಧ್ಯಯನ ಶಿಬಿರ– ಡಾ. ಸುಕನ್ಯಾ ಪ್ರಭಾಕರ್, ಸರಸ್ವತಿಪುರಂ, 13ನೇ ಮೇನ್ ಲೀಲಾ ನಾಗರಾಜ್ ನಿವಾಸ, ನಂ. 510, ಸಂಜೆ 4 ರಿಂದ 6.



ಮೈಸೂರಿನ ಶಿಕ್ಷಕರ ಬಡಾವಣೆಯಲ್ಲಿರುವ ಡಾ. ರಾಧಾಕೃಷ್ಣ ಪಾರ್ಕ್ ನಲ್ಲಿ ವಿಶ್ವಗುರು ಬಸವೇಶ್ವರ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು ಬಸವಣ್ಣನವರ ವಿಗ್ರಹಕ್ಕೆ ಪುಷ್ಪಾರ್ಚನೆ, ವಚನ ಗಾಯನ ಮತ್ತು ಪ್ರಸಾದವನ್ನು ವಿತರಿಸಲಾಯಿತು, ರಮೇಶ ನಾಯಕ್, ಪುಷ್ಪವೇಣಿ, ಯಳಂದೂರು ಸುಂದರ್, ರಮೇಶ್ ನಾಯಕ್, ಶ್ರೀಕಂಠಸ್ವಾಮಿ, ಮಲ್ಲಿಕಾರ್ಜುನ ಸ್ವಾಮಿ, ವೆಂಕಟರಾಮು, ನಾರಾಯಣಸ್ವಾಮಿ, ಮಹೇಶ್ವರಿ, ಪದ್ಮ, ಸುಜಾತ, ದಯಾಮಣಿ, ರುಕ್ಮಿಣಿಯಮ್ಮ, ಆಯೋಜಕ ಮೈಕ್ ಪ್ರಕಾಶ್ ಇದ್ದರು.



ಮೈಸೂರು ನಗರ ಮಹಿಳಾ ಕಾಂಗ್ರೆಸ್ ಸಮಿತಿಯವರು ಶೇ.33 ಮಹಿಳಾ ಮೀಸಲಾತಿಯನ್ನು ತಕ್ಷಣ ಜಾರಿಗೆ ಆಗ್ರಹಿಸಿ ಸಹಿ ಸಂಗ್ರಹಿಸುವ ಮೂಲಕ ಕಾಂಗ್ರೆಸ್ ಭವನ ಮುಂಭಾಗದಲ್ಲಿ ಇತ್ತೀಚೆಗೆ ಪ್ರತಿಭಟಿಸಿದರು.

ಪುಸ್ತಕ ಸಂಸ್ಕೃತಿಗೆ ಉತ್ತೇಜನ ನೀಡುವುದು ಅಗತ್ಯ

ಮೈಸೂರು ಕವಿ-ಕಾವ್ಯ ಸಮ್ಮೇಳನದಲ್ಲಿ ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ ವಿ. ಬೈರಿ ಮಾರ್ಮಿಕ ಮಾತು

ಇಲ್ಲದಿದ್ದರೆ ಭವಿಷ್ಯದಲ್ಲಿ ಪೊಲೀಸ್ ಇಲಾಖೆಗೆ ಹೆಚ್ಚು ಹಣ ವ್ಯಯಿಸಬೇಕಾಗುತ್ತದೆ | ಸಾಂಸ್ಕೃತಿಕ ಕಾರ್ಯಕ್ರಮ, ಸಾಧಕರಿಗೆ ಪ್ರಶಸ್ತಿ ಪ್ರದಾನ

• **ಕನ್ನಡಪ್ರಭ ವಾರ್ತೆ** ಮೈಸೂರು

ರಾಜ್ಯ ಸರ್ಕಾರವು ಪ್ರಸ್ತುತ ಪುಸ್ತಕ ಸಂಸ್ಕೃತಿಗೆ ಉತ್ತೇಜನ ನೀಡದಿದ್ದಲ್ಲಿ ಭವಿಷ್ಯದಲ್ಲಿ ಪೊಲೀಸ್ ಇಲಾಖೆಗೆ ಹೆಚ್ಚು ಹಣ ವ್ಯಯಿಸಬೇಕಾಗುತ್ತದೆ ಎಂದು ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ ವಿ. ಬೈರಿ ಮಾರ್ಮಿಕವಾಗಿ ಹೇಳಿದರು.

ಕಾವ್ಯಶ್ರೀ ಚಾರಿಟಬಲ್ ಟ್ರಸ್ಟ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಅಸೋಸಿಯೇಷನ್ ಆಫ್ ಅಲೆಯನ್ಸ್ ಕ್ಲಬ್ ಇಂಟರ್ ನ್ಯಾಷನಲ್ ಸಹಯೋಗದಲ್ಲಿ ವಿಜಯನಗರದ ಸಾಹಿತ್ಯ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ ಮೈಸೂರು ಕವಿ- ಕಾವ್ಯ ಸಮ್ಮೇಳನದಲ್ಲಿ ಮಾತನಾಡಿದ ಅವರು, ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಮೂಲಕ ಪುಸ್ತಕಗಳ ಸಗಟು ಖರೀದಿಯನ್ನು ರಾಜ್ಯ ಸರ್ಕಾರ ಸ್ಥಗಿತಗೊಳಿಸುವುದು ಒಳ್ಳೆಯ ಬೆಳವಣಿಗೆಯಲ್ಲ. ಈ ಕೂಡಲೇ ಇದನ್ನು ಪುನಾರಂಭಿಸಬೇಕು ಎಂದು ಆಗ್ರಹಿಸಿದರು.

ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಪೂರೈಸಿದರೆ ಯುವಜನತೆ ಆ ಕಡೆ ಗಮನಹರಿಸುತ್ತಾರೆ. ಇಲ್ಲದಿದ್ದಲ್ಲಿ ಈಗಾಗಲೇ ಸಾಮಾಜಿಕ ಜಾಲತಾಣಗಳ ಹಾವಳಿಯಿಂದಾಗಿ ದಾರಿ ತಪ್ಪುತ್ತಿರುವವರು ಮತ್ತಷ್ಟು ಅವನತಿಯ ಕಡೆಗೆ ಸಾಗುತ್ತಾರೆ. ಇದರಿಂದ ಅಪರಾಧ ಕೃತ್ಯಗಳು ಹೆಚ್ಚಾಗಿ, ನಿಯಂತ್ರಣಕ್ಕೆ ಹೆಚ್ಚು ಮಂದಿ ಪೊಲೀಸರನ್ನು ನೇಮಿಸಕೊಳ್ಳಬೇಕಾಗುತ್ತದೆ ಎಂದು ಅವರು ಎಚ್ಚರಿಸಿದರು.

ಮೊದಲೆಲ್ಲಾ ಮಕ್ಕಳಿಗೆ ನೈತಿಕ ಶಿಕ್ಷಣ ಕಲಿಸಲಾಗುತ್ತಿತ್ತು. ಈಗ ಅದು ಇಲ್ಲವೇ ಇಲ್ಲ. ಆದ್ದರಿಂದ ಪ್ರತಿಯೊಬ್ಬರೂ ನಮ್ಮ ಸಂಸ್ಕಾರ, ಸಂಸ್ಕೃತಿಯನ್ನು ಉಳಿಸುವ ಕೆಲಸದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಅವರು ಕಿವಿಮಾತು ಹೇಳಿದರು

ಕಾವ್ಯ ಎಂದರೇ ಪದಗಳ ಜೋಡಣೆ ಅಷ್ಟೇ ಇಲ್ಲ. ಅನುಭವಗಳನ್ನು ಧಾರೆ ಎರೆಯುವಂಥದ್ದು ಎಂದ ಅವರು, ಸಾಧಕರಿಗೆ ಸನ್ಮಾನ ಎಂದರೇ ಸಮಾಜದ ಅಭಿವೃದ್ಧಿಗೆ ಪೂರಕವಾದದ್ದು ಎಂದರು.

ಸಾನ್ನಿಧ್ಯ ವಹಿಸಿದ್ದ ಬೆಂಗಳೂರು ರಾಮೋಹಳ್ಳಿ ಸಿದ್ಧಾರೂಢ ಮಿಷನ್ ಆಶ್ರಮದ ಶ್ರೀ ಆರೂಢ ಭಾರತೀ ಸ್ವಾಮೀಜಿ ಆಶೀರ್ವಚನ ನೀಡಿ, ಸಾಹಿತ್ಯ, ಸಂಗೀತದಿಂದ ಕಲೆ ಬೆಳಗುತ್ತದೆ. ಸಾಹಿತ್ಯ ಎಂದರೇ ಜೀವನಾನುಭವದ ಸಾರ. ಅನುಭವದ ಪರಿಪಕ್ವತೆ ಎಂದು ಬಣ್ಣಿಸಿದರು.

ಟಿವಿ ಸುದ್ದಿಗಳಿಗಿಂತ ವೃತ್ತಪತ್ರಿಕೆಗಳ ಸುದ್ದಿಗಳು ನಿಖರವಾದವು ಆದ್ದರಿಂದ ಮೊಬೈಲ್, ಟಿವಿ, ಸಾಮಾಜಿಕ ಜಾಲತಾಣಗಳಿಗಿಂದ ಪುಸ್ತಕ, ಪತ್ರಿಕೆಗಳನ್ನು ಓದಿ ಎಂದು ಅವರು ಸಲಹೆ ಮಾಡಿದರು.

ಈ ಬಾರಿಯ ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಪ್ರಥಮ ಸ್ಥಾನ ಪಡೆದಿರುವ ಎಚ್.ಡಿ. ಕೋಟೆ ತಾ.ಬಿಇಒ ಸಿ.ಎನ್. ರಾಜು ಸನ್ಮಾನ ಸ್ವೀಕರಿಸಿ ಮಾತನಾಡಿ, ನಮ್ಮ ಪ್ರಯತ್ನ, ಶಿಕ್ಷಕರ ಪರಿಶ್ರಮ ಹಾಗೂ ವಿದ್ಯಾರ್ಥಿಗಳಿಗೆ ನಡೆಸಿದ ಪರೀಕ್ಷೆಗಳಿಂದ ಉತ್ತಮ ಫಲಿತಾಂಶ ಸಿಕ್ಕಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಬೆಂಗಳೂರಿನ ರಮಣಶ್ರೀ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ ಕನ್ನಡ ಪ್ರಾಧ್ಯಾಪಕ ಡಾ.ಬಿ. ಪ್ರಹ್ಲಾದ್ ರೆಡ್ಡಿ ಸಮ್ಮೇಳನಾಧ್ಯಕ್ಷತೆ, ಜಿಲ್ಲಾ ಕಸಾಪ ಉಪಾಧ್ಯಕ್ಷ ಟಿ. ತ್ಯಾಗರಾಜ್ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಸಮ್ಮೇಳನ ಉದ್ಘಾಟಿಸಿದರು. ವಿಜಯಪುರ ಜಿಲ್ಲಾಧ್ಯಕ್ಷ ಪಂಡೀತ ಭೀ. ಅವಜಿ, ಎಚ್.ಡಿ ಕೋಟೆ ತಾ. ಸರ್ಕಾರಿ ನೌಕರರ ಸಂಘದ ರಾಜ್ಯ ಪರಿಷತ್ ಸದಸ್ಯ ಬಿ.ಎಸ್. ಮಂಜುನಾಥ್ ಮುಖ್ಯ ಅತಿಥಿಗಳಾಗಿದ್ದರು.

ಕಾವ್ಯಶ್ರೀ ಚಾರಿಟಬಲ್ ಟ್ರಸ್ಟ್ ರಾಜ್ಯಾಧ್ಯಕ್ಷ ಜಿ. ಶಿವಣ್ಣ ಸ್ವಾಗತಿಸಿ, ಪ್ರಾಸ್ತಾವಿಕ ಭಾಷಣ ಮಾಡಿದರು. ನಾಗರತ್ನ ಗುಂಡಪ್ಪ ಪ್ರಾರ್ಥಿಸಿದರು. ಬಿ.ಎ. ಪಾರ್ವತಿ ಕಾರ್ಯಕ್ರಮ ನಿರೂಪಿಸಿದರು.

ನಂತರ ಪುಷ್ಪಾ ನಾಗತಿಹಳ್ಳಿ ಅವರ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ನಡೆಯಿತು. ಕವಿ- ಕಾವ್ಯ ಬೆಳವಣಿಗೆ ಹಾಗೂ ಚಟುವಟಿಕೆಗಳ ವರ್ತಮಾನ ಯುವಪೀಳಿಗೆಯ ಪಾಲು ಕುರಿತು ವಿಷಯ ಮಂಡಿಸಲಾಯಿತು. ವಿವಿಧ ಕ್ಷೇತ್ರಗಳ ಸಾಧಕರಿಗೆ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬೆಂಗಳೂರಿನ ಶಶಿಕುಮಾರ್ ಮತ್ತು ತಂಡದವರು- ಗೊರವರ ನೃತ್ಯ, ವಿಜಯಪುರ ಜಿಲ್ಲೆಯ ದೇವೇಂದ್ರ ಗೊಂದಳ ಮತ್ತು ತಂಡದಿಂದ ಗೊಂದಳ ಜಾನಪದ, ಮೈಸೂರಿನ ಕೆ. ಸುಶೀಲಾರಾವ್ ನೇತೃತ್ವದ ವಾಗೀಶ್ವರೀ ಭಜನಾ ಮಂಡಳಿಯಿಂದ ಜಾನಪದ ಗೀತೆ, ಚಿತ್ರದುರ್ಗ ಕಲಾತಂಡದಿಂದ ಸೋಬಾನೆ ಹಾಡು ಪ್ರಸ್ತುತಪಡಿಸಿದರು.



ಮೈಸೂರು ಕನ್ನಡ ಸಾಹಿತ್ಯ ಭವನದಲ್ಲಿ ಕಾವ್ಯಶ್ರೀ ಚಾರಿಟಬಲ್ ಟ್ರಸ್ಟ್ ಭಾನುವಾರ ಏರ್ಪಡಿಸಿದ್ದ ಕವಿ- ಕಾವ್ಯ ಸಮ್ಮೇಳನವನ್ನು ಗಣ್ಯರು ಉದ್ಘಾಟಿಸಿದರು.

ಕವಿಯ ಅನುಭವವನ್ನು ನಿರ್ದಿಷ್ಟ ಚೌಕಟ್ಟಿನಲ್ಲಿ ಹೇಳುವುದೇ ಪದ್ಯ..

ಸಮ್ಮೇಳನಾಧ್ಯಕ್ಷರಾಗಿದ್ದ ಬೆಂಗಳೂರಿನ ರಮಣಶ್ರೀ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ ಕನ್ನಡ ಪ್ರಾಧ್ಯಾಪಕ ಡಾ.ಬಿ. ಪ್ರಹ್ಲಾದರೆಡ್ಡಿ ಮಾತನಾಡಿ, ಕವಿಯ ಅನುಭವವನ್ನು ನಿರ್ದಿಷ್ಟ ಚೌಕಟ್ಟಿನಲ್ಲಿ ಹೇಳುವುದೇ ಪದ್ಯ ಎಂದು ವ್ಯಾಖ್ಯಾನಿಸಿದರು.

ಪದ್ಯ ಎಲ್ಲವನ್ನು ಬಿಚ್ಚಿಡುವಂಥದ್ದಲ್ಲ. ಸೂಕ್ಷ್ಮವಾಗಿ ಹೇಳುವಂಥದ್ದು. ಹೀಗಾಗಿ ಕವಿ ಹೇಳಬೇಕಾದ್ದನ್ನು ಸೂಕ್ಷ್ಮವಾಗಿ ಹೇಳುತ್ತಾನೆ. ಕಾವ್ಯ ಎಂಬುದು ಭಾವನೆಗಳ ಪರಾಕಾಷ್ಠೆ ಎಂದರು.

ಇದಕ್ಕೆ ಅವರು ಎಚ್.ಡುಂಡಿರಾಜ್ ಅವರ ''ಮಾರ್ಕೆಟ್‌ನಲ್ಲಿ ಸಿಕ್ಕಳು ನನ್ನ ನೋಡಿ ನಕ್ಕಳು, ನಮಗಿಬ್ಬರು ಮಕ್ಕಳು'' ಎಂಬುದನ್ನು ನಿದರ್ಶನವಾಗಿ ಹೇಳಿದರು.

ರಾಮಾಯಣ ಕಥೆ ಹೇಳುವುದು ಎಂದರೇ ತಲೆನೋವು. ಒಂದೂರಿನಲ್ಲಿ ಒಬ್ಬಳು ಅಜ್ಜಿ ಇದ್ದಳು. ಅವಳು ಪೂರ್ಣ ರಾಮಾಯಣ ಕಥೆ ಹೇಳಿದವರಿಗೆ ಮಜ್ಜಿಗೆ ಕೊಡುವುದಾಗಿ ಹೇಳಿದ್ದಳು. ಆಕೆಯ ಬಳಿ ಯಾರೂ ಮಜ್ಜಿಗೆ ಪಡೆಯಲು ಆಗಿರಲಿಲ್ಲ. ಆದರೆ ಬಾಲಕಿಯೊಬ್ಬಳು ಹೋಗಿ, ದಶರಥನ ಕಂದ, ರಾವಣನನ್ನು ಕೊಂದ. ಸೀತೆಯನ್ನು ವಾಪಸ್ ಕರೆತಂದ ಎಂದು ಹೇಳಿ, ರಾಮಾಯಣ ಕಥೆ ಮುಗಿಯಿತೆಂದು ಮಜ್ಜಿಗೆ ಗಿಟ್ಟಿಸಿದಳು ಎಂಬ ಸ್ವಾರಸ್ಯಕರ ಮಾತುಗಳ ಮೂಲಕ ಸಭಿಕರ ಮೆಚ್ಚುಗೆಗೆ ಪಾತ್ರರಾದರು.

ಸುದ್ದಿ ಸಿಂಚನ

ನಟನ ರಂಗಭೂಮಿ ಡಿಪ್ಲೋಮಾಗೆ ಆಹ್ವಾನ

ಮೈಸೂರು: ನಟನ ರಂಗಶಾಲೆಯ ರಂಗಭೂಮಿ ಡಿಪ್ಲೊಮಾ 2026-27 (ಒಂದು ವರ್ಷದ ಅಭಿನಯ ಮತ್ತು ರಂಗ ತರಬೇತಿ) ಪ್ರವೇಶ ಪ್ರಕ್ರಿಯೆ ಮತ್ತು ಸಂದರ್ಶನ ಮೇ 17 ರಂದು ಬೆಳಗ್ಗೆ 10ಕ್ಕೆ ರಾಮಕೃಷ್ಣ ನಗರದ ನಟನದಲ್ಲಿ ನಡೆಯಲಿದೆ. ಮಂಡ್ಯ ರಮೇಶ್ ನೇತೃತ್ವದ ನಟನ ರಂಗಶಾಲೆಯು ಕಳೆದ ಅನೇಕ ವರ್ಷಗಳಿಂದ ರಂಗಭೂಮಿಯಲ್ಲಿ ನಿರಂತರ ಕ್ರಿಯಾಶೀಲವಾಗಿ ದುಡಿಯುತ್ತಿದ್ದು, ರಂಗಭೂಮಿಯ ಅಧ್ಯಯನ, ಪ್ರಾತ್ಯಕ್ಷಿಕೆ, ಪ್ರಯೋಗ, ಪ್ರದರ್ಶನಗಳ ಮೂಲಕ ಶ್ರೇಷ್ಠತೆ ಸಾಧಿಸುವುದರತ್ತ ಸತತವಾಗಿ ಪ್ರಯತ್ನ ಶೀಲವಾಗಿದೆ. ಪ್ರತಿದಿನ ಸಂಜೆ 5.30 ರಿಂದ 9ರವರೆಗೆ ತರಗತಿಗಳು ನಡೆಯಲಿದ್ದು, ಅಭಿನಯ, ರಂಗ ಸಿದ್ಧಾಂತ, ರಂಗ ಸಂಗೀತ, ಆಂಗಿಕ ಚಲನೆ, ಧ್ವನಿ ಬಳಕೆ, ಪ್ರಸಾಧನ, ಬೆಳಕು, ರಂಗ ವಿನ್ಯಾಸ, ಪರಿಕರ ನಿರ್ಮಾಣ, ರಂಗಇತಿಹಾಸ, ನಾಟಕ ತಯಾರಿ, ಪ್ರದರ್ಶನ ಹೀಗೆ ರಂಗಭೂಮಿಯ ಬೇರೆ ಬೇರೆ ಆಯಾಮಗಳ ಪರಿಚಯಾತ್ಮಕ ಪ್ರಾಯೋಗಿಕ ತರಗತಿಗಳು ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 72595 37777, 94804 68327, ಸಂಪರ್ಕಿಸಬಹುದು.

ಶೇ.80ಕ್ಕೂ ಹೆಚ್ಚು ಅಂಕ ಪಡೆದವರಿಗೆ ಜ್ಞಾನದೀಪ ಕಾಲೇಜಲ್ಲಿ ಉಚಿತ ಪ್ರವೇಶ

ಮೈಸೂರು: ನಗರದ ಗಂಗೋತ್ರಿ ಬಡಾವಣೆಯಲ್ಲಿರುವ ಜ್ಞಾನದೀಪ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿ.ಕಾಂ ಕೋರ್ಸ್ ಗಳಿಗೆ ಪ್ರವೇಶಾತಿ ನಡೆಯುತ್ತಿದ್ದು, ದ್ವಿತೀಯ ಪಿಯುಸಿಯಲ್ಲಿ ಶೇ.80 ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರಥಮ ವರ್ಷ ಶುಲ್ಕ ವಿನಾಯಿತಿ ನೀಡಲಾಗುವುದು ಎಂದು ಕಾಲೇಜಿನ ಪ್ರಾಂಶುಪಾಲೆ ಮೇರಿ ಫ್ಲೋರೆನ್ಸ್ ತಿಳಿಸಿದರು. ಅಧ್ಯಾಪನ್ ಎಜುಕೇಷನ್ ಎಂಪೈರ್ ನೇತೃತ್ವದಲ್ಲಿ ಈ ಯೋಜನೆ ಹಮ್ಮಿಕೊಳ್ಳಲಾಗಿದೆ. ಏಕ ಪೋಷಕರು, ರೈತರು, ಪೌರಕಾರ್ಮಿಕರು ಹಾಗೂ ದಿನಗೂಲಿ ನೌಕರರ ಮಕ್ಕಳಿಗೂ ವಾರ್ಷಿಕ ಶುಲ್ಕದಲ್ಲಿ ಶೇ.50 ರಿಯಾಯಿತಿ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 97405 00533, 97318 89699 ಸಂಪರ್ಕಿಸಬಹುದು ಎಂದು ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು. ಪಿಯು ವಿಭಾಗದ ಪ್ರಾಂಶುಪಾಲ ಪ್ರವೀಣ್, ಅಧ್ಯಾಪನ್ ಸಲಹೆಗಾರ ಸಂಧಾನಕೃಷ್ಣ ಇದ್ದರು.

ಸಕಾಲ ಸಾಧನೆಗೆ ಹಿಂದಿನ ಎಡಿಸಿ ಪರಿಶ್ರಮ ಕಾರಣ

ಮೈಸೂರು: ಕಳೆದ ಏಪ್ರಿಲ್ ತಿಂಗಳಿನಲ್ಲಿ ಡಾ.ಪಿ. ಶಿವರಾಜು ಅವರು ನಿರಂತರವಾಗಿ ಎಲ್ಲಾ ಇಲಾಖೆಗಳ



ಹಿರಿಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿದ್ದರ ಫಲವಾಗಿ ಸಕಾಲದಲ್ಲಿ ಮೈಸೂರು ಜಿಲ್ಲೆ ದ್ವಿತೀಯ ಸ್ಥಾನಪಡೆಯಲು ಸಾಧ್ಯವಾಯಿತು. ಸಾರ್ವಜನಿಕರ ಸಕಾಲ ಅರ್ಜಿಗಳು ನಿಗದಿತ ಅವಧಿಯೊಳಗೆ ಇತ್ಯರ್ಥ ಆಗುತ್ತಿದ್ದವು. ಹೀಗಾಗಿ ಸಕಾಲ ರ‍್ಯಾಂಕಿಂಗ್ ಉತ್ತಮಗೊಂಡಿದೆ. ಕಳೆದ ಜನವರಿ ತಿಂಗಳಿನಲ್ಲಿ ಮೈಸೂರು 4 ನೇ ಸ್ಥಾನ ಗಳಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಈ ಬಾರಿ ರಾಜ್ಯಕ್ಕೆ 2ನೇ ಸ್ಥಾನ ಗಳಿಸುವ ಮೂಲಕ ಅಭಿನಂದನೆಗೆ ಅರ್ಹವಾಗಿದೆ. ಇಡೀ ದಿನ ಪ್ರತಿ ಎರಡು ಗಂಟೆಗಳಿಗೊಮ್ಮೆ ಪ್ರಗತಿ ಪರಿಶೀಲನೆಯನ್ನು ಸ್ವತಃ ಶಿವರಾಜು ನಡೆಸುತ್ತಿದ್ದರು. ಬೆಳಗ್ಗೆ 10ಕ್ಕೆ ಇರುತ್ತಿದ್ದ ಬಾಕಿ ಅರ್ಜಿಗಳು ಆಯಾ ದಿನ ಸಂಜೆ 6ಕ್ಕೆ ವಿಲೇವಾರಿಯಾಗುವಂತೆ ವ್ಯವಸ್ಥೆ ಮಾಡಿದ್ದರು.

ಸ್ವರಾನುಭೂತಿಯೊಂದಿಗೆ ಆರೈಕೆಯ ಜಾಗೃತಿ

ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನಿಂದ ನಿಧಿ ಸಂಗ್ರಹ

• **ಕನ್ನಡಪ್ರಭ ವಾರ್ತೆ** ಮೈಸೂರು

ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ವತಿಯಿಂದ ಉಪಶಮನ ಆರೈಕೆ ಕಾರ್ಯಕ್ರಮದ ನಿಧಿ ಸಂಗ್ರಹ ಹಾಗೂ ಜಾಗೃತಿಗಾಗಿ ಆಯೋಜಿಸಿದ್ದ ಸ್ವರಾನುಭೂತಿ 2026 ಸಂಗೀತ ಸಂಜೆಯು ಯಶಸ್ವಿಯಾಗಿ ನೆರವೇರಿತು.



ಮಾರಣಾಂತಿಕ ಹಾಗೂ ದೀರ್ಘಕಾಲೀನ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳಿಗೆ ಘನತೆಯ ಬದುಕು ಮತ್ತು ಆರೈಕೆ ನೀಡುವ ಉದ್ದೇಶದೊಂದಿಗೆ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸಂಸ್ಥೆಯ ಸಿಇಒ ಪ್ರಾಸ್ತಾವಿಕವಾಗಿ ಮಾತನಾಡಿದ ಸವಿತಾ ಸುಳುಗೋಡು ಮಾತನಾಡಿ, ಭಾರತದಲ್ಲಿ ಸುಮಾರು 85 ಲಕ್ಷ ಜನರಿಗೆ ಉಪಶಮನ ಆರೈಕೆಯ ಅಗತ್ಯವಿದೆ. ಆದರೆ, ದುರದೃಷ್ಟವಶಾತ್ ಶೇ. 5ಕ್ಕಿಂತ ಕಡಿಮೆ ಜನರಿಗೆ ಮಾತ್ರ ಈ ಸೇವೆ ಲಭ್ಯವಾಗುತ್ತಿದೆ. ಈ ಅಂತರವನ್ನು ಕಡಿಮೆ ಮಾಡಲು ಮತ್ತು ದೇಶಾದ್ಯಂತ ಈ ಸೇವೆಯನ್ನು ವ್ಯಾಪಕಗೊಳಿಸುವುದು ಇಂದಿನ ತುರ್ತು ಎಂದು ಕಳವಳ ವ್ಯಕ್ತಪಡಿಸಿದರು.

ಸಂಸ್ಥೆಯ ಸಂಸ್ಥಾಪಕರು ಹಾಗೂ ಕೇಂದ್ರ ಸರ್ಕಾರದ ಸಾಮರ್ಥ್ಯ ಅಭಿವೃದ್ಧಿ ಆಯೋಗದ ಸದಸ್ಯ ಡಾ.ಆರ್. ಬಾಲಸುಬ್ರಮಣಿಯಂ ಮಾತನಾಡಿ, ಸ್ವರಾನುಭೂತಿ ಎಂದರೆ ಕೇವಲ ಸಂಗೀತವಲ್ಲ, ಅದು ಸಮಾಜದ ಬದ್ಧತೆಯ ಪ್ರತಿಬಿಂಬ. ಸ್ವಾಮಿ ವಿವೇಕಾನಂದರ 'ಶಿವಜ್ಞಾನೇ ಜೀವ ಸೇವಾ' ಸಂದೇಶದಂತೆ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಶಿವನನ್ನು ಕಂಡು ಸೇವೆ ಮಾಡುವುದು ನಮ್ಮ ಗುರಿ. ಚಿಕಿತ್ಸೆಗೆ ಮಿತಿ ಇರಬಹುದು, ಆದರೆ ಪ್ರೀತಿಯ ಆರೈಕೆಗೆ ಯಾವುದೇ ಮಿತಿ ಇರಬಾರದು ಎಂದರು.

ಕಳೆದ ನಾಲ್ಕು ದಶಕಗಳಿಂದ ಆರೋಗ್ಯ, ಶಿಕ್ಷಣ ಮತ್ತು ಜೀವನೋಪಾಯ ಕ್ಷೇತ್ರಗಳಲ್ಲಿ ವಿವೇಕಾನಂದ ಸಂಸ್ಥೆಯು ನಡೆದುಬಂದ ಹಾದಿಯನ್ನು ಪರಿಚಯಿಸುವ ಕಿರು ಸಾಕ್ಷ್ಯಚಿತ್ರ ಪ್ರದರ್ಶಿಸಲಾಯಿತು. ಈ ವೇಳೆ ಉಪಶಮನ ಆರೈಕೆ ಕ್ಷೇತ್ರದಲ್ಲಿ ಶ್ರಮಿಸಿದ ವೈದ್ಯರು, ಹಿತೈಷಿಗಳು, ಸ್ವಯಂಸೇವಕರನ್ನು ಸನ್ಮಾನಿಸಲಾಯಿತು.

ಸಂಜೆ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಖ್ಯಾತ ಗಾಯಕ ವಿಜಯ ಪ್ರಕಾಶ್ ಮತ್ತು ಅನುರಾಧಾ ಭಟ್ ತಮ್ಮ ಸುಮಧುರ ಧ್ವನಿಯ ಮೂಲಕ ನೆರೆದಿದ್ದವರನ್ನು ಮಂತ್ರಮುಗ್ಧಗೊಳಿಸಿದರು. ಸಂಗೀತದ ನಡುವೆಯೇ ಕೆಲವು ರೋಗಿಗಳು ಮತ್ತು ಅವರ ಕುಟುಂಬದವರು ತಮ್ಮ ವೈಯಕ್ತಿಕ ಅನುಭವಗಳನ್ನು ಹಂಚಿಕೊಂಡಾಗ ಇಡೀ ಸಭಾಂಗಣ ಭಾವುಕ ಕ್ಷಣಗಳಿಗೆ ಸಾಕ್ಷಿಯಾಯಿತು.

ಈಗಾಗಲೇ ಕರ್ನಾಟಕದಾದ್ಯಂತ 12,000ಕ್ಕೂ ಹೆಚ್ಚು ಕುಟುಂಬಗಳಿಗೆ ಉಚಿತ ಸೇವೆ ನೀಡಲಾಗುತ್ತಿದೆ. ಕ್ಯಾನ್ಸರ್, ಎಚ್.ಐವಿ, ಪಾರ್ಶ್ವವಾಯು ಮತ್ತು ಸೆರಿಬ್ರಲ್ ಪಾಲ್ಸಿಯಂತಹ ಗಂಭೀರ ಕಾಯಿಲೆಯಿಂದ ಬಳಲುವವರಿಗೆ ಸಮಗ್ರ ಆರೈಕೆ ಮಾಡಲಾಯಿತು.

ಕಾರ್ಮಿಕರ ಶೋಷಣೆ ವಿರುದ್ಧ ಹೋರಾಟ

ಕಾರ್ಮಿಕ ಮುಖಂಡ ಪ್ರಮೋದ್ ಚಿಕ್ಕಮಣ್ಣೂರು ಕರೆ



• **ಕನ್ನಡಪ್ರಭ ವಾರ್ತೆ** ಮೈಸೂರು

ಸಾಮ್ರಾಜ್ಯಶಾಹಿಗಳು ಬಿಟ್ಟುಹೋದ ಗುಲಾಮಗಿರಿ ಸಂಕೇತದ ದಿನಗೂಲಿ, ಬದಲೀ ಹಾಗೂ ಹೊರಗುತ್ತಿಗೆ ಪದ್ಧತಿಯನ್ನು ಇಂದಿನ ಸರ್ಕಾರಗಳು ಮುಂದುವರಿಸುತ್ತಿರುವುದು ವಿಷಾದನೀಯ. ಸಂಘಟಿತ ಮತ್ತು ಅಸಂಘಟಿತ ವಲಯದ ಕಾರ್ಮಿಕರು ಒಂದಾಗಿ ಹೋರಾಡದಿದ್ದರೆ ಈ ಶೋಷಣೆಯಿಂದ ಮುಕ್ತಿ ಸಿಗದು ಎಂದು ಕಾರ್ಮಿಕ ಮುಖಂಡ ಪ್ರಮೋದ್ ಚಿಕ್ಕಮಣ್ಣೂರು ಎಚ್ಚರಿಸಿದರು.

ನಗರದಲ್ಲಿ ಆಯೋಜಿಸಿದ್ದ ಕಾರ್ಮಿಕ ದಿನಾಚರಣೆ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಕೇಂದ್ರ ಸರ್ಕಾರವು ಜಾರಿಗೆ ತಂದಿರುವ 4 ಹೊಸ ಕಾರ್ಮಿಕ ಸಂಹಿತೆಗಳಿಂದ ಕಾರ್ಮಿಕರಿಗೆ ಭವಿಷ್ಯದಲ್ಲಿ ಎದುರಾಗಬಹುದಾದ ಸಮಸ್ಯೆಗಳ ಬಗ್ಗೆ ಗಂಭೀರ ಚಿಂತನೆ ನಡೆಸಬೇಕು. ಈ ಕುರಿತು ಸಮಗ್ರ ಹೋರಾಟ ರೂಪಿಸದಿದ್ದರೆ ಕಾರ್ಮಿಕರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಸಿಗುವುದಿಲ್ಲ ಎಂದು ಅವರು ಅಭಿಪ್ರಾಯಪಟ್ಟರು.

ಕೇಂದ್ರದ ಸಂಹಿತೆಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರ ವಿಳಂಬ ಮಾಡುತ್ತಿದೆ. ಇದರಿಂದ ಕಾರ್ಮಿಕರು ಮತ್ತಷ್ಟು ಸಂಕಷ್ಟಕ್ಕೆ ಸಿಲುಕುವ ಆತಂಕವಿದ್ದು, ಕೂಡಲೇ ನಿಯಮಗಳನ್ನು ಜಾರಿಗೆ ತರಬೇಕೆಂದು ಆಗ್ರಹಿಸಿದರು. ಜೆ.ಕೆ. ಟೈರ್ಸ್ ಬದಲಿ ಕಾರ್ಮಿಕ ಸಂಘದ ಅಧ್ಯಕ್ಷ ಗಂಗಾಧರಸ್ವಾಮಿ ಸ್ವಾಗತಿಸಿದರು. ದಿನಗೂಲಿ ನೌಕರರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ವೆಂಕಟರಾಜು ಕಾರ್ಮಿಕ ಸಮಾವೇಶದ ಉದ್ದೇಶಗಳನ್ನು ವಿವರಿಸಿದರು.ಘಿ ವೇದಿಕೆಯಲ್ಲಿ ಕಿರ್ಲೋಸ್ಕರ್ ಕಾರ್ಮಿಕ ಸಂಘದ ಅಧ್ಯಕ್ಷ ಆರ್. ದಿಲೀಪ್, ಚಾಮರಾಜ ನಗರದ ಶ್ರೀಕಂಠ, ಜಗದೀಶ್, ಜಿಲ್ಲಾ ಗಾರ್ಮೆಂಟ್ಸ್ ನೌಕರರ ಪರವಾಗಿ ಎಂ. ನಿವೇದಿತಾ ಮತ್ತು ವೆಂಕಟೇಶ್ ಇದ್ದರು. ಜೆ.ಕೆ.ಟೈರ್ಸ್ ಬದಲಿ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಶಿವಸ್ವಾಮಿ ವಂದಿಸಿದರು.

ಕಾರ್ಮಿಕರ ಮೇಲಿನ ದೌರ್ಜನ್ಯ ಖಂಡಿಸಿ ಸಿಐಟಿಯು ಪ್ರತಿಭಟನೆ

ಸರ್ಕಾರ ಕಾರ್ಪೊರೇಟ್ ಹಿತಾಸಕ್ತಿ ರಕ್ಷಿಸಲು ಕಾರ್ಮಿಕರ ಹಕ್ಕು ಕುಗ್ಗಿಸುತ್ತಿದೆ ಎಂದು ಆರೋಪ

• **ಕನ್ನಡಪ್ರಭ ವಾರ್ತೆ** ಮೈಸೂರು

ಕಾರ್ಮಿಕರ ಮೇಲಾಗುತ್ತಿರುವ ದೌರ್ಜನ್ಯ, ದಮನ ನೀತಿ ಖಂಡಿಸಿ ಸಿಐಟಿಯು ಜಿಲ್ಲಾ ಸಮಿತಿಯವರು ನಗರದ ರಾಮಸ್ವಾಮಿ ವೃತ್ತದಲ್ಲಿ ಇತ್ತೀಚೆಗೆ ಪ್ರತಿಭಟಿಸಿದರು.



ಉತ್ತರಪ್ರದೇಶ, ಹರಿಯಾಣದ ಬಿಜೆಪಿ ನೇತೃತ್ವದ ಸರ್ಕಾರಗಳು ನೋಯ್ಡಾ, ಗ್ರೇಟರ್‌ನೋಯ್ಡಾ, ಗುರುಗ್ರಾಮ್ ಮತ್ತು ರಾಷ್ಟ್ರೀಯ ರಾಜಧಾನಿ ಪ್ರದೇಶದಲ್ಲಿ ಕಾರ್ಮಿಕರ ಹೋರಾಟಗಳ ಮೇಲೆ ನಡೆಸುತ್ತಿರುವ ಕ್ರೂರ ದಮನ ಖಂಡನಿಯ. ಇದು ಕೇವಲ ಕೈಗಾರಿಕಾ ವಿವಾದವಲ್ಲ. ಇದು ನೇರ ವರ್ಗ ಸಂಘರ್ಷದ ಧೈರ್ಯಶಾಲಿ ಅಭಿವ್ಯಕ್ತಿ. ಇಲ್ಲಿ ಸರ್ಕಾರದ ಯಂತ್ರಾಂಗ ಕಾರ್ಪೊರೇಟ್ ಹಿತಾಸಕ್ತಿಗಳನ್ನು ರಕ್ಷಿಸಲು ಕಾರ್ಮಿಕರ ಹಕ್ಕುಗಳನ್ನು ತೀವ್ರತರವಾಗಿ ಕುಗ್ಗಿಸುತ್ತಿದೆ ಎಂದು ಅವರು ಕಿಡಿಕಾರಿದರು.

ವೇತನ ಹೆಚ್ಚಳ ನಾಟಕೀಯವಾಗಿದೆ. ಬದುಕಲು ಅಗತ್ಯವಾದ ಮಟ್ಟಕ್ಕಿಂತ ಬಹಳ ಕಡಿಮೆ. ಉತ್ತರಪ್ರದೇಶ ಮತ್ತು ಹರಿಯಾಣದ ಕಾರ್ಮಿಕರು ದೆಹಲಿಯಂತೆ ಸಮಾನ ಜೀವನ ವೆಚ್ಚ ಇದ್ದರೂ ಕಡಿಮೆ ವೇತನ ಪಡೆಯುತ್ತಿದ್ದಾರೆ. ಏರುತ್ತಿರುವ ಬೆಲೆ ಏರಿಕೆಯ ನಡುವೆ ತಿಂಗಳಿಗೆ 26000 ಕನಿಷ್ಠ ವೇತನದ ಬೇಡಿಕೆ ಕೇವಲ ಬೇಡಿಕೆ ಅಲ್ಲ, ಅದು ಅವಶ್ಯಕತೆ. ದೆಹಲಿಯ ಶಕ್ತಿ ಕೇಂದ್ರದಲ್ಲಿ ಗುತ್ತಿಗೆ ಕಾರ್ಮಿಕರ ನಿರ್ದಯ ಶೋಷಣೆಯಿದೆ ಎಂದು ಅವರು ಆರೋಪಿಸಿದರು.

ಬಂಧಿತ ಕಾರ್ಮಿಕರನ್ನು ತಕ್ಷಣ ಯಾವುದೇ ಷರತ್ತುಗಳಿಲ್ಲದೆ ಬಿಡುಗಡೆ ಮಾಡಬೇಕು. ಸುಳ್ಳು ಪ್ರಕರಣಗಳನ್ನು ಹಿಂಪಡೆಯಬೇಕು, ದಮನ ನಿಲ್ಲಿಸಬೇಕು ಮತ್ತು ಅನಧಿಕೃತ ಬಂಧನಗಳನ್ನು ರದ್ದುಗೊಳಿಸಬೇಕು. ಟ್ರೇಡ್ ಯೂನಿಯನ್ ಗಳೊಂದಿಗೆ ತ್ರಿಪಕ್ಷೀಯ ಮಾತುಕತೆ, ಭಾರತೀಯ ಕಾರ್ಮಿಕ ಸಮ್ಮೇಳನವನ್ನು ತಕ್ಷಣ ಕರೆಯಬೇಕು. 25 ಸಾವಿರ ಕನಿಷ್ಠ ವೇತನ, 8 ಗಂಟೆಗಳ ಕೆಲಸದ ದಿನ, ಡಬಲ್ ಓವರ್ ಟೈಮ್, ಸುರಕ್ಷತೆ, ಒಪ್ಪಂದ ಕಾರ್ಮಿಕರಿಗೆ ಸಮಾನ ಹಕ್ಕು, ಅಗ್ಗದ ಎಲ್ ಪಿಜಿ ಮತ್ತು ಒಪ್ಪಂದ ಕಾರ್ಮಿಕ ವ್ಯವಸ್ಥೆಯ ರದ್ದುಪಡಿಸಬೇಕು ಎಂದು ಅವರು ಒತ್ತಾಯಿಸಿದರು.

ಸಿಐಟಿಯು ಜಿಲ್ಲಾಧ್ಯಕ್ಷ ಎಂ. ಅಣ್ಣಪ್ಪ, ಪ್ರಧಾನ ಕಾರ್ಯದರ್ಶಿ ಎನ್.ಕೆ. ಬಾಲಾಜಿ ರಾವ್ ಮೊದಲಾದವರು ಇದ್ದರು.

ಪಾಶ್ಚಿಮಾತ್ಯ ದೇಶದಲ್ಲಿ ಜ್ಞಾನವು ಬೆಳಕಾದರೆ, ನಮ್ಮಲ್ಲಿ ಭಕ್ತಿ ಬೆಳಕು

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಅಭಿಮತ



ಮೈಸೂರಿನ ರಾಮಾನುಜ ರಸ್ತೆಯ ಮೈಸೂರು ಆರ್ಟ್ ಗ್ಯಾಲರಿಯಲ್ಲಿ ಭಾನುವಾರ ಆಯೋಜಿಸಿದ್ದ ಮನೆಗೊಂದು ಗ್ರಂಥಾಲಯ ಅನುಷ್ಠಾನ ಕಾರ್ಯಕ್ರಮವನ್ನು ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಉದ್ಘಾಟಿಸಿದರು. ಮ.ಗು. ಸದಾನಂದಯ್ಯ, ಎಲ್. ಶಿವಲಿಂಗಪ್ಪ, ಎಂ. ಚಂದ್ರಶೇಖರ್ ಇದ್ದಾರೆ.

• **ಕನ್ನಡಪ್ರಭ ವಾರ್ತೆ** ಮೈಸೂರು

ಪಾಶ್ಚಿಮಾತ್ಯ ರಾಷ್ಟ್ರಗಳು ಜ್ಞಾನವನ್ನು ಬೆಳಕಾಗಿಸಿಕೊಂಡರೆ, ಭಾರತದಲ್ಲಿ ಭಕ್ತಿಯನ್ನು ಬೆಳಕಾಗಿಸಿಕೊಳ್ಳಲಾಗಿದೆ. ಭಾರತದಲ್ಲಿ ಭಕ್ತಿಗೆ ನೀಡಿರುವ ಒತ್ತನ್ನು ಪುಸ್ತಕಗಳಿಗೆ ನೀಡಿಲ್ಲ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಅಭಿಪ್ರಾಯಪಟ್ಟರು.

ನಗರದ ರಾಮಾನುಜ ರಸ್ತೆಯಲ್ಲಿರುವ ಮೈಸೂರು ಆರ್ಟ್ ಗ್ಯಾಲರಿಯಲ್ಲಿ ಭಾನುವಾರ ಏರ್ಪಡಿಸಿದ್ದ ಮನೆಗೊಂದು ಗ್ರಂಥಾಲಯ ಅನುಷ್ಠಾನ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪೂಜಾ ಸಾಮಾಗ್ರಿ ಮಾರಾಟ ಮಾಡುವವರು, ದಿನೇ ದಿನೇ ಆರ್ಥಿಕವಾಗಿ ಅಭಿವೃದ್ಧಿಯಾದರೆ, ಸಾಹಿತ್ಯ ಬರಹಗಾರ, ಪ್ರಕಾಶಕ ಈಗಲೂ ಬದುಕು ಸಾಗಿಸಲು ಒದ್ದಾಡುವ ಪರಿಸ್ಥಿತಿ ಇದೆ. ಪುಸ್ತಕಗಳನ್ನು ಓದುವ ಮೂಲಕ ಭಾರತೀಯರು ಜಗತ್ತಿಗೆ ಜ್ಞಾನದ ಬೆಳಕಾಗಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಪುಸ್ತಕ ಓದುವ ಸಂಪ್ರದಾಯವನ್ನು ಪಾರಂಪರಿಕವಾಗಿ ಬೆಳೆಸಿಕೊಳ್ಳದಿರುವುದೇ ದೊಡ್ಡ ಮಟ್ಟದಲ್ಲಿ ಓದುಗರು ಸೃಷ್ಟಿಯಾಗದಿರುವುದಕ್ಕೆ ಕಾರಣ. ಭಾರತದಲ್ಲಿ ಸಾಹಿತ್ಯ ಓದುಗರ ಮತ್ತು ಸಾಹಿತ್ಯ ಪ್ರಿಯರ ಸಂಖ್ಯೆ ಕಡಿಮೆ ಇದೆ. ಸಾಹಿತ್ಯದ ಪುಸ್ತಕಗಳನ್ನು ಓದುವ ಸಂಸ್ಕೃತಿ, ಈ ದೇಶದಲ್ಲಿ ಪರಂಪರೆ, ಸಂಪ್ರದಾಯವಾಗಿಲ್ಲ ಬಂದಿಲ್ಲ ಎಂದರು.

ಶಾಲಾ ಕಾಲೇಜುಗಳಲ್ಲಿ ಮಕ್ಕಳಿಗೆ ಸಾಹಿತ್ಯದ ಅಭಿರುಚಿ ಮೂಡಿಸಿ, ಸಾಹಿತ್ಯದ ಮೂಲಕವೂ ಬದುಕು ಕಟ್ಟಿಕೊಳ್ಳಬಹುದಾದ ಮಾರ್ಗಗಳನ್ನು ಇವತ್ತಿನ ಸಮಾಜ ನಿರ್ಮಾಣ ಮಾಡಬೇಕಿದೆ ಎಂದು ಸಲಹೆ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿವೃತ್ತ ಉಪ ನಿರ್ದೇಶಕ ಮ.ಗು. ಸದಾನಂದಯ್ಯ, ಮನೆಗೊಂದು ಪುಸ್ತಕ ಜಿಲ್ಲಾ ಜಾಗೃತ ಸಮಿತಿ ಮೈಸೂರು ಸಂಚಾಲಕ ಎಂ. ಚಂದ್ರಶೇಖರ್, ಕಲಾವಿದ ಹಾಗೂ ಲೇಖಕ ಎಲ್. ಶಿವಲಿಂಗಪ್ಪ ಮೊದಲಾದವರು ಇದ್ದರು.

ಕೃಷಿ | ಸುತ್ತೂರು ಶ್ರೀಕ್ಷೇತ್ರದಲ್ಲಿ ಶ್ರೀಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ, ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ರೈತರ ಶಿಬಿರ'

ಮಿಶ್ರ ಬೆಳೆ ಲಾಭದ ಹೊಳೆ: ಡಾ.ನಾಗರಾಜಪ್ಪ ಅಡಿವಪ್ಪರ್

• **ಕನ್ನಡಪ್ರಭ ವಾರ್ತೆ** ಸುತ್ತೂರು

ಮಿಶ್ರ ಬೆಳೆ ಲಾಭದ ಹೊಳೆ ಎಂದು ಶಿವಮೊಗ್ಗದ ಕೆಳದಿ ಶಿವಪ್ಪನಾಯಕ ಕೃಷಿ ತೋಟಗಾರಿಕೆ ವಿಶ್ವವಿದ್ಯಾಲಯದ ಅಡಿಕೆ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕ ಡಾ. ನಾಗರಾಜಪ್ಪ ಅಡಿವಪ್ಪರ್ ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ಶ್ರೀಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿರುವ ರೈತರ ಶಿಬಿರದಲ್ಲಿ ಅವರು ಉಪನ್ಯಾಸ ನೀಡಿದರು.

ವೈವಿಧ್ಯತೆಯ ಬೆಳೆ ಮತ್ತು ಮಿಶ್ರ ಬೆಳೆ ಪದ್ಧತಿಗಳು ಸುಸ್ಥಿರ ಕೃಷಿಯ ಎರಡು ಪ್ರಮುಖ ಸ್ತಂಭಗಳು. ರೈತರಿಗೆ ಲಾಭ ಹೆಚ್ಚಿಸಲು ಮತ್ತು ಪರಿಸರವನ್ನು ರಕ್ಷಿಸಲು ಸಹಾಯ ಮಾಡುತ್ತವೆ. ರೈತರು ಮಿಶ್ರ ಬೆಳೆಗೆ ಪ್ರಥಮ ಆದ್ಯತೆ ನೀಡಬೇಕು. ಕೃಷಿಯಲ್ಲಿ ಪ್ರಾಮಾಣಿಕತೆ, ಬೆಳೆಗಳ ಬಗ್ಗೆ ನಂಬಿಕೆ ಇರಬೇಕು. ಪೂರ್ಣ ಪ್ರಮಾಣದಲ್ಲಿ ಕೃಷಿಯಲ್ಲಿ ತೊಡಗಿದಾಗ ಲಾಭಗಳಿಸಲು ಸಾಧ್ಯವಿದೆ. ಮುಂಗಾರು ಮತ್ತು ಹಿಂಗಾರು ಬೆಳೆ ಬೆಳೆಯುವಾಗ ಮಿಶ್ರಬೆಳೆಗಳಿಗೆ ಆದ್ಯತೆ ನೀಡಬೇಕು ಎಂದರು.



ರೈತರ ಶಿಬಿರಾರ್ಥಿಗಳಿಂದ ಕಪಿನಾರತಿ.

ಡಾ.ಎಚ್.ವಿ. ಬಿಂದು ಅವರು ಸಾವಯವ ಕೃಷಿ ಕ್ಷೀಣಿಸುತ್ತಿರುವ ಮಣ್ಣಿನ ಫಲವತ್ತತೆ ಹೆಚ್ಚಿಸಿ ಪರಿಸರದಲ್ಲಿ ಸಮತೋಲನ ಕಾಪಾಡುತ್ತದೆ. ಆರೋಗ್ಯಕರ ಮತ್ತು ಸುರಕ್ಷಿತ ಆಹಾರ ಎಂದರೆ ಪೌಷ್ಟಿಕಾಂಶಯುಕ್ತ ತಾಜಾ ಆಹಾರವಾಗಿದೆ. ಸಾವಯವ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ ಇದೆ. ರೈತರು ಬಿತ್ತನೆಯಿಂದ ಕೊಯ್ಲಿನವರೆಗೆ ಪ್ರಕ್ರಿಯೆಗಳನ್ನು ವೈಜ್ಞಾನಿಕವಾಗಿ ಯೋಚಿಸಬೇಕು. ಸಾಲ ಸೌಲಭ್ಯ, ವಿಮೆ ಮತ್ತು ಉತ್ಪಾದನಾ ವೆಚ್ಚದ ಸರಿಯಾದ ಲೆಕ್ಕಾಚಾರ ಮಾಡಬೇಕು ಎಂದರು.

ಕೃಷಿ ಮಾರುಕಟ್ಟೆ ಸಮಿತಿ ಮೂಲಕ ತಾಂತ್ರಿಕ ಹಾಗೂ ಮಾರುಕಟ್ಟೆ ತರಬೇತಿ ಪಡೆಬಹುದು. ಕೃಷಿ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಮಾರಲು ಕರ್ನಾಟಕ ಸರ್ಕಾರವು 162ಕ್ಕೂ ಹೆಚ್ಚು ಮಾರುಕಟ್ಟೆಗಳಲ್ಲಿ ಅವಕಾಶ ಕಲ್ಪಿಸಿದೆ. ಇದರಿಂದ ರೈತರ ಉತ್ಪನ್ನಗಳಿಗೆ ಉತ್ತಮ ಬೆಲೆ ಸಿಗುತ್ತದೆ. ಕೃಷಿ ವ್ಯವಹಾರವು ಕೇವಲ ಬೇಸಾಯವಲ್ಲದೆ, ಅದನ್ನು ಒಂದು ಉದ್ಯಮವಾಗಿ ಪರಿಗಣಿಸಬೇಕು. ಮಾರುಕಟ್ಟೆಯ ಬೇಡಿಕೆಗೆ ಅನುಗುಣವಾಗಿ ಕೃಷಿ ಉತ್ಪಾದನೆಯನ್ನು ನಿರ್ವಹಿಸಿದರೆ ಹೆಚ್ಚಿನ ಲಾಭ ಗಳಿಸಬಹುದು ಎಂದು ತಿಳಿಸಿದರು.

ಶಿಬಿರಾರ್ಥಿಗಳು ಬೆಳಗ್ಗೆ ಸಾಮೂಹಿಕ ಪ್ರಾರ್ಥನೆ, ಯೋಗಾಭ್ಯಾಸದಲ್ಲಿ ಪಾಲ್ಗೊಂಡಿದ್ದರು. ಸುತ್ತೂರು ದರ್ಶನದಲ್ಲಿ ಶ್ರೀಮಠದ ಗುರುಪರಂಪರೆಯ ಅನಿಮೇಷನ್ ಸಾಕ್ಷ್ಯಚಿತ್ರ ವೀಕ್ಷಿಸಿ ಶ್ರೀಮಠದ ಭವ್ಯ ಇತಿಹಾಸ ಅರಿತರು. ಮೂಲಮಠ, ಶ್ರೀ ಸೋಮೇಶ್ವರ ದೇವಸ್ಥಾನ, ಶ್ರೀ ಮಹದೇಶ್ವರರು ರಾಗಿ ಬೀಸಿದ ಕಲ್ಲು ಹಾಗೂ ಶ್ರೀ ವೀರಭದ್ರೇಶ್ವರ ದೇವಸ್ಥಾನಗಳ ದರ್ಶನ ಪಡೆದರು.

ಕೃಷಿ ವಿಜ್ಞಾನ ಕೇಂದ್ರದಲ್ಲಿ ಬೆಳೆಗಳ ಪ್ರಾತ್ಯಕ್ಷಿಕೆ ವೀಕ್ಷಿಸಿದರು. ಗೋಶಾಲೆಯಲ್ಲಿ ದೇಸಿ ಗೋತಳಿಗಳ ಬಗ್ಗೆ ಮಾಹಿತಿ ಪಡೆದರು.

ಸಂಜೆ ಕಪಿಲಾ ನದಿ ತೀರದಲ್ಲಿ ಪ್ರಾರ್ಥನೆ ಹಾಗೂ ಕಪಿಲಾರತಿ ಕಾರ್ಯಕ್ರಮ ಶ್ರದ್ಧಾ ಭಕ್ತಿಯಿಂದ ನೆರವೇರಿತು. ಜಿ.ಎಲ್. ತ್ರಿಪುರಾಂತಕ ಅವರು ನದಿಗಳ ಮಹತ್ವಗಳ ಕುರಿತು ಮಾಹಿತಿ ನೀಡಿದರು. ನಂತರ ಶಿಬಿರಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನೀಡಿದರು.

ಸುದ್ದಿ ಸಿಂಚನ

ತಲೆಯನ್ನು ಕಲ್ಲಿನಿಂದ ಜಜ್ಜಿ ಬರ್ಬರ ಕೊಲೆ

ಕೆ.ಆರ್. ನಗರ: ಯಾರೋ ದುಷ್ಕರ್ಮಿಗಳು ಅಪರಿಚಿತ ವ್ಯಕ್ತಿಯ ಮುಖದ ಮೇಲೆ ಕಲ್ಲು ಎತ್ತು ಹಾಕಿ ಗುರುತು ಸಿಗದ ಹಾಗೆ ಕೊಲೆಮಾಡಿರುವ ಘಟನೆ ಚೀರನಹಳ್ಳಿ ಸಮೀಪ ನಡೆದಿದೆ. ಕೆ.ಆರ್. ನಗರಪಟ್ಟಣದ ಹೊರ ವಲಯದ ಚೀರನಹಳ್ಳಿ ಗ್ರಾಮದ ಬಳಿಯ ಚಾಮರಾಜ ಬಲದಂಡೆ ನಾಲೆ ಏರಿಯ ಪಕ್ಕದ ಪೊದೆಯಲ್ಲಿ ಸುಮಾರು 25 ರಿಂದ 30 ವರ್ಷ ವಯಸ್ಸಿನ ಅಪರಿಚಿತ ಗಂಡಸಿನ ಶವ ದೊರೆತಿದ್ದು, ಯಾರೋ ದುಷ್ಕರ್ಮಿಗಳು ಮುಖದ ಮೇಲೆ ಕಲ್ಲು ಎತ್ತಿ ಹಾಕಿ ಕೊಲೆ ಮಾಡಿದ್ದಾರೆ. ಮೃತನ ಮೈಮೇಲೆ ಹಸಿರು ಮತ್ತು ಕಪ್ಪು ಬಣ್ಣದ ಹಾಗೂ ಹೂವಿನ ಡಿಸೈನ್ ಇರುವ ತುಂಬುತೋಳಿನ ಶರ್ಟ್ ಹಾಗೂ ಕಪ್ಪು ಬಣ್ಣದ ಪ್ಯಾಂಟ್ ಧರಿಸಿದ್ದು, ಮೃತನ ಬಲಗೈ ರಟ್ಟೆಯಲ್ಲಿ ರಕ್ಷಿತ, ಶಿಲ್ಪಾ, ರಾಮು, ಲಲಿತಾ ಎಂಬ ಅಚ್ಚೆ ಗುರುತಿದೆ. ಮೃತನ ವಾರಸುದಾರರು ಇದ್ದಲ್ಲಿ ಕೆ.ಆರ್. ನಗರ ಪೊಲೀಸ್ ಠಾಣೆ ಮೊ. 94808 05036 ಸಂಪರ್ಕಿಸಬಹುದು.

ಮಹಿಳೆ ನಾಪತ್ತೆ

ಮೈಸೂರು: ಮೆಡಿಕಲ್ ಶಾಪ್ ಗೆ ಕೆಲಸಕ್ಕೆ ಹೋಗುತ್ತಿದ್ದ ಮಹಿಳೆ ಯೊಬ್ಬರು ತಿಲಕ್ ನಗರದಿಂದ ನಾಪತ್ತೆಯಾಗಿದ್ದಾರೆ. ತಿಲಕ ನಗರದ 4ನೇ ಮೇನ್, 3ನೇ ಕ್ರಾಸ್ ನಿವಾಸಿ ಆನಂದ್ ಅವರ ಪತ್ನಿ ಸಿ. ಗೌರಿ (36)



ನಾಪತ್ತೆ ಯಾದವರು. ಇವರಿಗೆ ಇಬ್ಬರು ಮಕ್ಕಳಿದ್ದಾರೆ. ಗೌರಿ ಅವರು 4.9 ಅಡಿ ಎತ್ತರ, ದುಂಡುಮುಖ, ಸಾಧಾರಣ ಮೈಕಟ್ಟು, ಬಿಳಿ ಮೈ ಬಣ್ಣವಿದ್ದು, ನೀಲಿ ಬಣ್ಣದ ಟಾಪ್, ಕಪ್ಪು ಬಣ್ಣದ ಪ್ಯಾಂಟ್ ಧರಿಸಿದ್ದಾರೆ. ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಮಾತನಾಡುವರು. ಈ ಚಹರೆಯುಳ್ಳ ಮಹಿಳೆ ಕಂಡುಬಂದಲ್ಲಿ ಮಂಡಿ ಮೊಹಲ್ಲಾ ಪೊಲೀಸ್‌ಠಾಣೆ ದೂ. 0821- 2418339 ಸಂಪರ್ಕಿಸಬಹುದು.

ಅಪರಿಚಿತರ ಸಾವು

ಮೈಸೂರು: ಪ್ರತ್ಯೇಕ ಪ್ರಕರಣದಲ್ಲಿ ಮೂವರು ಅಪರಿಚಿತ ವ್ಯಕ್ತಿಗಳು ಮೃತಪಟ್ಟಿದ್ದಾರೆ. ನಗರದ ನಜರ್ ಬಾದ್ ಪೊಲೀಸ್ ಠಾಣೆ ವ್ಯಾಪ್ತಿಯ ವಿದ್ಯಾನಗರದ ಅಸ್ವಸ್ಥನಾಗಿ ಬಿದ್ದದ್ದ ವ್ಯಕ್ತಿ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ಸುಮಾರು 40 ವರ್ಷ, 5.6 ಅಡಿ ಎತ್ತರ, ಎಣಗೆಂಪು ಮೈಬಣ್ಣ, ಕೋಲು ಮುಖ, ತಲೆಯಲ್ಲಿ ಬಿಳಿ ಮಿಶ್ರಿತ ಕಪ್ಪು ಕೂದಲಿದೆ. ಎಡ ಕೈನಲ್ಲಿ ಮಂಗಳಮ್ಮ ಎಂದು ಅಚ್ಚೆ ಇದ್ದು, ಬಲ ಕಿವಿಯಲ್ಲಿ ಚಿಕ್ಕ ಓಲೆ ಧರಿಸಿರುತ್ತಾರೆ. ನೀಲಿ ಮತ್ತು ಕಪ್ಪು ಬಣ್ಣದ ಉದ್ದ ಗೆರೆಯುಳ್ಳ ತುಂಬು ತೋಳಿನ ಕಾಟನ್ ಶರ್ಟ್ ಹಾಗೂ ಕಪ್ಪು ಬಣ್ಣದ ಟ್ರ್ಯಾಕ್ ಪ್ಯಾಂಟ್ ಮತ್ತು ಕಪ್ಪು ಬಣ್ಣದ ಪೂಮರ್‌ಹೆಸರಿನ ಅಂಡರ್ ವೇರ್‌ಧರಿಸಿದ್ದಾರೆ. ಮತ್ತೊಂದು ಪ್ರಕರಣದಲ್ಲಿ ಬಿ.ಎನ್. ರಸ್ತೆಯಲ್ಲಿ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ವ್ಯಕ್ತಿಯೊಬ್ಬರು ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ಸುಮಾರು 40 ವರ್ಷ, 5.6 ಅಡಿ ಎತ್ತರ, ಎಣಗೆಂಪು ಮೈಬಣ್ಣ, ಕೋಲು ಮುಖ, ನೇರಳ ಬಣ್ಣದ ತುಂಬು ತೋಳಿನ ಕಾಟನ್ ಶರ್ಟ್, ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಧರಿಸಿದ್ದಾರೆ. ಎಡ ಭಾಗದಲ್ಲಿ ಎಂಎ ಹಾಗೂ ಯಶಸ್ವಿನಿ ಎಂಬ ಹಸಿರು ಅಚ್ಚೆ ಇದೆ. ಈ ಎರಡೂ ಪ್ರಕರಣದಲ್ಲಿ ವಾರಸುದಾರರು ಕಂಡು ಬಂದಲ್ಲಿ ನಜರಬಾದ್ ಪೊಲೀಸ್ ಠಾಣೆ ದೂ. 0821-2418308, 0821-2418339 ಸಂಪರ್ಕಿಸಬಹುದು.

ನನ್ನನ್ನು ಹರಸಿ, ಬೆಳೆಸಿದ ಚೇತನ ಡಾ.ರಾಜ್‌ಕುಮಾರ್

ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಜಯಮಾಲಾ | ಅರುಣರಾಗ ಕ್ರಿಯೇಷನ್ಸ್‌ನಿಂದ ರಾಜ್ ಸಂಗಮ, ಗಿರಿಕನ್ಯೆ ಸಂಭ್ರಮ

• **ಕನ್ನಡಪ್ರಭ ವಾರ್ತೆ** ಮೈಸೂರು

ನನ್ನನ್ನು ಹರಸಿ, ಬೆಳೆಸಿದ ಚೇತನ ಡಾ.ರಾಜ್ ಕುಮಾರ್ ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಡಾ.ಜಯಮಾಲಾ ಸ್ಮರಿಸಿದರು.

ನಗರದ ಅರುಣರಾಗ ಕ್ರಿಯೇಷನ್ಸ್ ವತಿಯಿಂದ ಡಾ. ರಾಜ್ ಕುಮಾರ್‌ಹಾಗೂ ಡಾ. ಪುನೀತ್ ರಾಜ್‌ಕಮಾರ್‌ಹುಟ್ಟುಹಬ್ಬ ಪ್ರಯುಕ್ತ ವಿಶ್ವೇಶ್ವರ ನಗರದ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಸಭಾಂಗಣದಲ್ಲಿ ಭಾನುವಾರ ಸಂಜೆ ಏರ್ಪಡಿಸಿದ್ದ ರಾಜ್ ಸಂಗಮ, ಗಿರಿಕನ್ಯೆ ಸಂಭ್ರಮ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಂಗಳೂರಿನಲ್ಲಿ ಹುಟ್ಟಿ, ಚಿಕ್ಕಮಗಳೂರಿನಲ್ಲಿ ಬೆಳೆದ 16 ವರ್ಷದ ನನ್ನನ್ನು ಅಂದು ಗುರುತಿಸಿ, ''ಗಿರಿಕನ್ಯೆ ಚಿತ್ರದ ನಾಯಕಿಯಾಗಿ ಆಯ್ಕೆ ಮಾಡದಿದ್ದರೆ'' ನಾನು ಇಲ್ಲಿಯವರೆಗೆ ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ ಡಾ.ರಾಜ್‌ಕುಮಾರ್ ಅವರು ಆ ವೇಳೆಗೆ ಗೌರಿಶಂಕರದೆತ್ತರಕ್ಕೆ ಬೆಳೆದಿದ್ದರು. ಅವರೊಂದಿಗೆ ಅಭಿನಯಿಸುವುದು ಎಂದರೇ ಒಂದು ರೀತಿಯ ಸಂಚಲನ. ಅವರೊಂದಿಗೆ ಏಳು ಚಿತ್ರಗಳಲ್ಲಿ ಅಭಿನಯಿಸಿದ ನಾನೇ ಭಾಗ್ಯವಂತೆ ಎಂದರು.



ಅರುಣರಾಗ ಕ್ರಿಯೇಷನ್ಸ್ ವಿಶ್ವೇಶ್ವರ ನಗರದ ಬಿಎಐ ಸಭಾಂಗಣದಲ್ಲಿ ಏರ್ಪಡಿಸಿದ್ದ ರಾಜ್ ಸಂಗಮ, ಗಿರಿಕನ್ಯೆ ಸಂಭ್ರಮ ಕಾರ್ಯಕ್ರಮವನ್ನು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಡಾ.ಜಯಮಾಲಾ ಉದ್ಘಾಟಿಸಿದರು.

ರಾಜ್ಯದಲ್ಲಿ ಯಾರೇ ಮುಖ್ಯಮಂತ್ರಿಯಾದರೂ ಡಾ.ರಾಜ್‌ಕುಮಾರ್ ಅವರನ್ನು ಭೇಟಿ ಮಾಡುತ್ತಿದ್ದರು. ಎಂ. ವೀರಪ್ಪ ಮೊಯ್ಲಿ, ಎಚ್.ಡಿ. ದೇವೇಗೌಡರು ಭೇಟಿ ಮಾಡಿದಾಗ ಕಲಾವಿದರ ಕೋಟಾದಿಂದ ವಿಧಾನ ಪರಿಷತ್‌ಗೆ ನನ್ನನ್ನು ನಾಮನಿರ್ದೇಶನ ಮಾಡಿ ಎಂದು ಶಿಫಾರಸ್ ಮಾಡಿದ್ದರು. ಆದರೆ ಅವರು ಬದುಕಿದ್ದಾಗ ಆಗಲಿಲ್ಲ. ನಂತರ ಆಯಿತುಅದೇ ರೀತಿ ಪಾರ್ವತಮ್ಮ ರಾಜ್‌ಕುಮಾರ್ ಅವರು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷೆಯಾಗುವಂತೆ ಹರಸಿದ್ದರು. ನಾನು ಈ ಸ್ಥಾನಕ್ಕೆ ಬಂದೆ. ಆದರೆ ಪಾರ್ವತಮ್ಮ ಅವರು ಇರಲಿಲ್ಲ ಎಂದು ನೆನಪಿಸಿಕೊಂಡರು.

ರಾಜೇಂದ್ರಸಿಂಗ್ ಬಾಬು ನಿರ್ದೇಶನದ, ಅಂಬರೀಶ್ ನಾಯಕನಟನಾಗಿರುವ ''ಅಂತ'' ಚಿತ್ರದಲ್ಲಿ ಪ್ರೇಮವಿದೆ... ಹಾಡಿನಲ್ಲಿ ನಟಿಸಲು ನಾನು ನಿರಾಕರಿಸಿದ್ದೆ. ಆದರೆ ಉಡುಪಿ ಜಯರಾಂ ಅವರು ಮನವೊಲಿಸಿದರು. ಈ ಚಿತ್ರ ನಮ್ಮ ಮೂವರಿಗೂ ಪುನರ್ಜನ್ಮ ನೀಡಿತು. ಅಲ್ಲದೇ ಭಾರತದ ಬೇರೆ ಬೇರೆ ಭಾಷೆಗಳಲ್ಲಿಯೂ ಬಂತು, ದೊಡ್ಡ ಹೆಸರನ್ನು ತಂದುಕೊಟ್ಟಿತು ಎಂದು ಅವರು ಹೇಳಿದರು.

ವೃತ್ತಿಯಲ್ಲಿ ಪ್ರಸೂತಿತಜ್ಞೆಯಾಗಿರುವ ಡಾ. ರೇಖಾಅರುಣ್‌ಹಾಗೂಅವರತಂಡದಲ್ಲಿರುವವರು ಯಾರೂ ವೃತ್ತಿನಿರತ ಗಾಯಕರಲ್ಲ. ಬೇರೆ ಬೇರೆ ವೃತ್ತಿಯವರು ಸೇರಿಕೊಂಡು ತಂಡ ರಚಿಸಿ, ಸಂಗೀತ ಸೇವೆ ಮಾಡುತ್ತಿರುವುದು, ಡಾ.ರಾಜ್‌ಕುಮಾರ್, ಡಾ.ಪುನೀತ್ ಅವರ ಹೆಸರಿನಲ್ಲಿ ಸಂಗೀತ ಸಂಜೆ ಏರ್ಪಡಿಸಿರುವುದು ಶ್ಲಾಘನೀಯ ಎಂದರು.

ಪಾರ್ವತಮ್ಮ ಅವರ ಸಹೋದರ, ಚಲನಚಿತ್ರ ನಿರ್ಮಾಪಕ ಶ್ರೀನಿವಾಸ್, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಆಯೂಬ್‌ಖಾನ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ಕಾರ್ಯದರ್ಶಿ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಮೈಸೂರು ಜಿಲ್ಲಾ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ನಾಗರಾಜ ವಿ. ಬೈರಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕೆ.ಆರ್. ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಎಚ್.ಪಿ. ಶೋಭಾ, ಗೋಲ್ಡನ್ ಸುರೇಶ್, ಎಡೆಯೂರು ಸಮೀವುಲ್ಲಾ ಅತಿಥಿಗಳಾಗಿದ್ದರು.

ಡಾ. ರಾಜ್‌ಕುಮಾರ್, ಡಾ. ಪುನೀತ್ ರಾಜ್ ಕುಮಾರ್‌ಹಾಗೂ ಡಾ. ಜಯಮಾಲಾ ಅಭಿನಯಿಸಿರುವ ಚಿತ್ರಗಳ ಗೀತೆಗಳನ್ನು ಡಾ. ರೇಖಾ ಅರುಣ್, ಗುರುರಾಜ್, ಜಗದೀಶ್, ಸೋಮಶೇಖರ್ ಮನ್ ಮೋಹನ್‌ರಾಜ್, ಗಣೇಶ್, ಸುದೀಂದ್ರ, ನಾದಮಯ ಪ್ರೇಮ್, ವಿನಯ್, ವಾದಿರಾಜ್, ನಾರಾಯಣಸ್ವಾಮಿ, ಪ್ರಿಯಾ, ಅಪೂರ್ವ ನಾರಾಯಣಸ್ವಾಮಿ, ಶಾಂತಕುಮಾರಿ, ಗೀತಾ ಶ್ರೀಧರ್, ಜಗದೀಶ್ ,ಪ್ರಣೀತ ಪ್ರಭಾಕರ್, ರತ್ನಾ ಲೋಕೇಶ್, ಉಮಾ, ಚೇತನ್ ಗೌಡ, ಸೋಮಶೇಖರ್, ರಂಗಸ್ವಾಮಿ, ರಾಜು, ರೂಪ್ ಕುಮಾರ್, ಸುದರ್ಶನ್, ಸುಂದರೇಶ್, ವಿನಯ್ ಮೊದಲಾದವರು ಹಾಡಿದರು. ಮಿಮಿಕ್ರಿ ಶ್ಯಾಮ್ ಕಾರ್ಯಕ್ರಮ ನಿರೂಪಿಸಿದರು. ಸಂಗೀತಾಸಕ್ತರು ಕಿಕ್ಕಿರಿದು ನೆರೆದಿದ್ದರು.

ರಾಜಕೀಯ ತಿರಸ್ಕರಿಸಿದ್ದ ಡಾ.ರಾಜ್ ಕುಮಾರ್

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕೃಷಿ ವಿಜ್ಞಾನಿ ಡಾ. ವಸಂತಕುಮಾರ್ ತಿಮಕಾಪುರ ಅಭಿಮತ

• **ಕನ್ನಡಪ್ರಭ ವಾರ್ತೆ** ಮೈಸೂರು

ರಾಜನಾದ ಮೇಲೆ ಮಂತ್ರಿ ಏಕೆ ಎಂದು ರಾಜಕೀಯವನ್ನು ಡಾ. ರಾಜಕುಮಾರ್ ನಯವಾಗಿ ತರಿಸ್ಕರಿಸಿದ್ದಾಗಿ ಕೃಷಿ ವಿಜ್ಞಾನಿ ಡಾ. ವಸಂತಕುಮಾರ್ ತಿಮಕಾಪುರ ಹೇಳಿದರು.

ನಗರದ ಕೃಷ್ಣಮೂರ್ತಿಪುರಂನ ಇಂಚರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಡಾ. ರಾಜ್ ಜನ್ಮದಿನೋತ್ಸವ ಹಾಗೂ ಡಾ. ರಾಜ್ ಸಾಧನಾ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಡಾ. ರಾಜ್ ಕುಮಾರ್‌ಅವನ್ನು ರಾಜಕೀಯಕ್ಕೆ ಬರುವಂತೆ ವಿವಿಧ ರಾಜಕೀಯ ಪಕ್ಷದ ಮುಖಂಡರು ಆಹ್ವಾನಿದ್ದರು. ಆದರೆ ನಯವಾಗಿ ತಿರಸ್ಕರಿಸಿದ್ದರು. ನಾನು ರಾಜಕೀಯಕ್ಕೆ ಬಂದರೆ ಏನಾಗುತ್ತದೆ ಎಂದು ಆತ್ಮೀಯರೊಂದಿಗೆ ಕೇಳಿದ್ದರು. ಅದಕ್ಕೆ ರಾಜಕೀಯಕ್ಕೆ ಬಂದರೆ ನೀವು ಮಂತ್ರಿ, ಮುಖ್ಯಮಂತ್ರಿ ಆಗುತ್ತೀರಿ ಎಂಬ ಮಾತಿಗೆ ಡಾ. ರಾಜ್ ಕುಮಾರ್ ಅವರು ಪ್ರತಿಕ್ರಿಯಿಸಿ ಕನ್ನಡಿಗರು ನನ್ನನ್ನು ರಾಜನನ್ನಾಗಿ ಮಾಡಿದ್ದಾರೆ. ರಾಜಕೀಯ ಬಂದು ಮಂತ್ರಿ ಆಗಲೇ ಎಂದು ತಿರಸ್ಕರಿಸಿದ್ದಾಗಿ ಅವರು ಹೇಳಿದರು.

ಡಾ. ರಾಜ್ ಕುಮಾರ್‌ಅವರು ನಾಡು-ನುಡಿಗಾಗಿ ನಡೆದ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಗೋಕಾಕ್ ಚಳುವಳಿಯ ಅವರ ಹೋರಾಟದಿಂದ ಸಾಕಷ್ಟು ಬದಲಾವಣೆಯಾಯಿತು. ರಾಜಕೀಯ ಉದ್ದೇಶದ ಚಳುವಳಿ, ಕಾರ್ಯಕ್ರಮಕ್ಕೆ ಅವರು ಬರುತ್ತಿರಲಿಲ್ಲ ಎಂದರು.



ಮೈಸೂರಿನ ಕೃಷ್ಣಮೂರ್ತಿಪುರಂನ ನಮನ ಕಲಾಮಂಟಪದಲ್ಲಿ ಭಾನುವಾರ ಇಂಚರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಡಾ. ರಾಜ್ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ಡಾ. ರಾಜ್ ಸಾಧನಾ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಡಾ.ರಾಜ್ ಕುಮಾರ್‌ಅವರ 'ಬಂಗಾರದ ಮನುಷ್ಯ ಚಲನಚಿತ್ರ ಅನೇಕರ ಮೇಲೆ ಪರಿಣಾಮ ಬೀರಿ ಕೃಷಿ ಚಟುವಟಿಕೆಯತ್ತ ಮುಖಮಾಡುವಂತೆ ಮಾಡಿದೆ. ಅವರು ಕೇವಲ ವ್ಯಕ್ತಿಯಾಗಿರಲಿಲ್ಲ, ಅವರೊಂದು ಶಕ್ತಿ, ಧೃವತಾರೆ, ಸಾಂಸ್ಕೃತಿಕ ಶಕ್ತಿ, ಬದುಕಿನ ಆದರ್ಶವಾಗಿದ್ದರು. ರಂಗಭೂಮಿಯಿಂದ ಬೆಳ್ಳಿ ತೆರೆವರೆಗೆ ನಡೆದು ಬಂದ ಕಲಾ ತಪಸ್ವಿಯ ಹಾದಿ ಎಲ್ಲರಿಗೂ ಮಾದರಿ ಎಂದರು.

ಡಾ.ರಾಜ್ ಕುಮಾರ್‌ಅವರ ಚಲನಚಿತ್ರಗಳು ಕೇವಲ ಮನರಂಜನೆ ಮಾತ್ರ ಸೀಮಿತವಾಗಿರಲಿಲ್ಲ. ಅವರು ಚಿತ್ರಗಳ ಮೂಲಕ ಕನ್ನಡ ಹಾಗೂ ಕನ್ನಡಿಗೆ ಸಂಸ್ಕೃತಿ, ಬದುಕಿನ ನೈತಿಕತೆಯನ್ನು ಎಲ್ಲರಿಗೂ ತಿಳಿಸುವ ಸಂದೇಶ ಸಾರಿದರು. ಅವರು ಅಭಿನಯಿಸಿದ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಹಾಗೂ ಕೌಟುಂಬಿಕ ಚಿತ್ರಗಳಲ್ಲಿ ಸಮಾಜದ ಉತ್ತಮ ಸಂದೇಶವನ್ನೇ ನೀಡಿದ್ದಾರೆ ಎಂದು ಅವರು ಹೇಳಿದರು.

ಕಲೆಗೆ ಸಮರ್ಪಣೆ ಮಾಡಿಕೊಂಡಿದ್ದ ಡಾ. ರಾಜ್ ಕುಮಾರ್‌ಅವರು ಚಲನಚಿತ್ರಗಳಲ್ಲಿ ಅಭಿನಯಿಸುವಾಗ ಆಯಾ ಪಾತ್ರದಲ್ಲಿ ತಲ್ಲೀನರಾಗಿರುತ್ತಿದ್ದರು. ಜೀವನಚೈತ್ರ ಚಲನಚಿತ್ರದ 'ನಾದಮಯ ಈ ಲೋಕವೆಲ್ಲಹಾಡಿನ ಚಿತ್ರೀಕರಣದಲ್ಲಿ ಹಿಮಾಲಯ ಪರ್ವತದಲ್ಲಿ ಕೊರೆಯುವ ಚಳಿಯಲ್ಲಿ ಸ್ವೆಟರ್‌ಹಾಕದೆ, ಚಪ್ಪಲಿ ಹಾಕದೆ ನಟಿಸಿದ್ದಾರೆ. ನಟನೆಯಲ್ಲಿ ಭಕ್ತಿಯ ಪರಾಕಾಷ್ಟೆ ತಲುಪಿತ್ತಿದ್ದಾಗಿ ಅವರು ಹೇಳಿದರು.

ಇದೇ ವೇಳೆ ಹವ್ಯಾಸಿ ರಂಗಭೂಮಿ ಕಲಾವಿದ ಸ್ವಾಮಿ ಮಹಾಮನೆ, ಪತ್ರಿಕಾ ಛಾಯಾಗ್ರಾಹಕ ಎಂ.ಎನ್. ಲಕ್ಷ್ಮೀನಾರಾಯಣ ಯಾದವ್, ಗಾಯಕ ರಾ.ಬಿ. ನಾಗರಾಜ್, ಸಮಾಜ ಸೇವಕ ಎಸ್. ವೆಂಕಟೇಶ್, ರೈತ ಜಯರಾಮ್, ಸಮಾಜ ಸೇವಕ ಆರ್. ಲಕ್ಷ್ಮಣ್, ಯೋಗ ಕ್ಷೇತ್ರದ ಅನಂತ್ ಅವರಿಗೆ ಡಾ. ರಾಜ್ ಸಾಧನಾ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಇದೇ ವೇಳೆ ವಿದ್ಯಾರ್ಥಿನಿ ಎಂ.ಪಿ. ನಿಧಿಶ್ರೀ ಅವರಿಗೆ ಡಾ. ರಾಜ್ ಪ್ರತಿಭಾ ಪುಸ್ಕಾರ ನೀಡಲಾಯಿತು.

ಸಾನ್ನಿಧ್ಯವನ್ನು ಮೇಲುಕೋಟೆಯ ವಂಗೀಪುರ ನಂಬೀಮಠದ ಪೀಠಾಧ್ಯಕ್ಷ ಇಳೈ ಆಳ್ವಾರ್‌ಸ್ವಾಮೀಜಿ ವಹಿಸಿದ್ದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಸುಗಮ ಸಂಗೀತ ಪರಿಷತ್ ಮೈಸೂರು ಘಟಕದ ಅಧ್ಯಕ್ಷ ನಾಗರಾಜ್ ವಿ. ಬೈರಿ, ಸಮಾಜಸೇವಕ ಕೆ. ರಘುರಾಂ ವಾಜಪೇಯಿ, ರಂಗಕರ್ಮಿ ರಾಜಶೇಖರ್ ಕದಂಬ, ಲೇಖಕ ಸತೀಶ್ ಚಂದ್ರ, ಉಪನ್ಯಾಸಕಿ ನಿವೇದಿತಾ, ಪ್ರತಿಷ್ಠಾನದ ಅಧ್ಯಕ್ಷ ರಂಗನಾಥ್ ಮೈಸೂರು ಮೊದಲಾದವರು ಇದ್ದರು.

ರೈತರ ಕೆರೆಗಳಿಗೆ ನೀರು ಹರಿಸಲು ಗಡುವುನೀಡಿದ ಚಂದನ್ ಗೌಡ

ಬೊಮ್ಮನಹಳ್ಳಿ ಬಳಿ ರೈತ ಕಲ್ಯಾಣ ಸಂಘದ ಸಭೆ



• **ಕನ್ನಡಪ್ರಭ ವಾರ್ತೆ** ಗುಂಡ್ಲುಪೇಟೆ

ತಾಲೂಕಿನ ಬೊಮ್ಮನಹಳ್ಳಿ ಸಮೀಪದ ನೀರು ವಿಭಜನೆಯಾಗುವ ಗೇಟ್ ಬಳಿ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ನೇತೃತ್ವದಲ್ಲಿ ರೈತರ ಕುಂದುಕೊರತೆ ಆಲಿಸುವ ಹಾಗೂ ಕೆರೆಗಳಿಗೆ ನೀರು ಹರಿಸುವ ಕುರಿತು ನಿರ್ಣಾಯಕ ಸಭೆ ನಡೆಸಲಾಯಿತು.

ಸುವರ್ಣ ನಗರ, ಬೊಮ್ಮನಹಳ್ಳಿ ಮತ್ತು ಅರಕಲವಾಡಿ ಭಾಗದ ಕೆರೆಗಳಿಗೆ ಸಮರ್ಪಕವಾಗಿ ನೀರು ಹರಿಯುತ್ತಿಲ್ಲ ಎಂಬ ರೈತರ ದೂರುಗಳ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಚಂದನ್ ಗೌಡ ಅವರು, ನೀರಾವರಿ ಇಲಾಖೆಯ ಅಧಿಕಾರಿಗಳೊಂದಿಗೆ ಸ್ಥಳದಲ್ಲೇ ಚರ್ಚೆ ನಡೆಸಿದರು.

ನೀರಿನ ಹಂಚಿಕೆಯಲ್ಲಿ ಆಗುತ್ತಿರುವ ತಾಂತ್ರಿಕ ತೊಂದರೆಗಳನ್ನು ಸರಿಪಡಿಸಿ, ರೈತರ ಬೆಳೆಗೆ ಮತ್ತು ಅಂತರ್ಜಲ ವೃದ್ಧಿಗೆ ಈ ಭಾಗದ ಕೆರೆಗಳಿಗೆ ತಕ್ಷಣವೇ ನೀರು ಹರಿಸಬೇಕೆಂದು ತಾಕೀತು ಮಾಡಿದರು.

ರೈತರು ಪ್ರತಿ ವರ್ಷ ನೀರಿನ ಸಮಸ್ಯೆ ಎದುರಿಸುವುದು ಸರಿಯಲ್ಲ. ಅಧಿಕಾರಿಗಳು ಕೇವಲ ತಾತ್ಕಾಲಿಕ ಕ್ರಮ ಕೈಗೊಳ್ಳದೆ, ಬೊಮ್ಮನಹಳ್ಳಿ ಗೇಟ್ ಬಳಿ ಇರುವ ನೀರು ವಿಭಜನೆಯ ಸಮಸ್ಯೆಗೆ ಶಾಶ್ವತವಾದ ವೈಜ್ಞಾನಿಕ ಪರಿಹಾರ ನೀಡಬೇಕು ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಕಾರ್ಯಕ್ರಮದಲ್ಲಿ ರೈತಕಲ್ಯಾಣ ಸಂಘದ ರಾಜ್ಯ, ಜಿಲ್ಲಾ, ತಾಲೂಕು ಘಟಕದ ಎಲ್ಲ ಪದಾಧಿಕಾರಿಗಳು ಅರಕಲವಾಡಿ ಹಾಗೂ ಸುತ್ತಮುತ್ತಲ ಗ್ರಾಮಗಳ ನೂರಾರು ಗ್ರಾಮಸ್ಥರು ರೈತರು ಬೆಂಬಲ ಸೂಚಿಸಿದರು.

ದಕ್ಷಿಣದ 7 ಸಕ್ಕರೆ ಕಾರ್ಖಾನೆ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ: ಗೂಳಿಗೌಡ

ರೈತರಿಗೆ ಕೊಡಬೇಕಾದ ಹಣಕ್ಕೆ ತಡೆ ಹಿನ್ನೆಲೆ ಸೂಕ್ತ ಕ್ರಮ ಕ್ಕೆ ಒತ್ತಾಯ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

2025-26ನೇ ಹಂಗಾಮಿನ ಕಬ್ಬು ಬೆಳೆಗಾರರ ಬಾಕಿ ಪ್ರೋತ್ಸಾಹಧನ ಪಾವತಿ, ರೈತರ ಬ್ಯಾಂಕ್ ಖಾತೆ ವಿವರಗಳನ್ನು ನೀಡಲು ನಿರಾಕರಿಸುತ್ತಿರುವ ಏಳು ಸಕ್ಕರೆ ಕಾರ್ಖಾನೆಗಳ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಗ್ಯಾರಂಟಿ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಕ್ಕರೆ ಖಾತೆ ಸಚಿವ ಶಿವಾನಂದ ಪಾಟೀಲ್ ಅವರಲ್ಲಿ ಮನವಿ ಮಾಡಿರುವ ಅವರು, 2025-26ನೇ ಸಾಲಿನ ಹಂಗಾಮಿನಲ್ಲಿ ರಾಜ್ಯದ ರೈತ ಸಮುದಾಯದ ಆರ್ಥಿಕ ಹಿತದೃಷ್ಟಿಯಿಂದ ಸರ್ಕಾರ ಪ್ರತಿ ಟನ್ ಕಬ್ಬಿಗೆ 100 ರು. ಹೆಚ್ಚುವರಿ ಪ್ರೋತ್ಸಾಹಧನ ಘೋಷಿಸಿತ್ತು. ಆದರೆ. ದಕ್ಷಿಣ ಕರ್ನಾಟಕದ ಬನ್ನಾರಿ ಅಮ್ಮನ್ ಶುಗರ್ಸ್ (ಕೊಳ್ಳೇಗಾಲ), ಚಾಮುಂಡೇಶ್ವರಿ ಶುಗರ್ಸ್ ಲಿ (ಚನ್ನರಾಯಪಟ್ಟಣ), ಕೋರಮಂಡಲ ಶುಗರ್ಸ್ (ಕೆ.ಆರ್.ಪೇಟೆ), ಚಾಮುಂಡೇಶ್ವರಿ ಶುಗರ್ಸ್ ಲಿಮಿಟೆಡ್ (ಮದ್ದೂರು), ಎಂಆರ್‌ಎನ್ ಕೇನ್ ಪವರ್ ಆ್ಯಂಡ್ ಬಯೋರಿಫೈನರೀಸ್ ಪ್ರೈ.ಲಿ (ಪಾಂಡವಪುರ), ಎನ್ ಎಸ್ ಎಲ್ ಶುಗರ್ಸ್ ಲಿ. (ಮದ್ದೂರು), ಬನ್ನಾರಿ ಅಮ್ಮನ್ ಶುಗರ್ಸ್ ಲಿಮಿಟೆಡ್ (ನಂಜನಗೂಡು) ಎಂಬ ಖಾಸಗಿ ಕಾರ್ಖಾನೆಗಳ ಹಠಮಾರಿ ಧೋರಣೆ ಮತ್ತು ಕಾನೂನು ಸಂಘರ್ಷದಿಂದ ರೈತರಿಗೆ ತೊಂದರೆಯಾಗಿದೆ ಎಂದು ಆರೋಪಿಸಿದ್ದಾರೆ.

ರಾಜ್ಯದ ಒಟ್ಟು 81 ಕಾರ್ಖಾನೆಗಳ ಪೈಕಿ ಉತ್ತರ ಕರ್ನಾಟಕದ 73 ಕಾರ್ಖಾನೆಗಳು ಸರ್ಕಾರದ ಆದೇಶಕ್ಕೆ ಬದ್ಧವಾಗಿ ರೈತರಿಗೆ ಸಕಾಲದಲ್ಲಿ ಪ್ರತಿ ಟನ್‌ಗೆ ಹೆಚ್ಚುವರಿ 100 ರು.ಗಳನ್ನು ಪಾವತಿ ಮಾಡುತ್ತಿವೆ. ಆದರೆ, ದಕ್ಷಿಣ ಕರ್ನಾಟಕದ ಈ ಏಳು ಖಾಸಗಿ ಕಾರ್ಖಾನೆಗಳು ಸರ್ಕಾರದ ಆದೇಶ ಪ್ರಶ್ನಿಸಿ ನ್ಯಾಯಾಲಯದ ಮೊರೆ ಹೋಗಿವೆ. ಅಲ್ಲದೆ, ಜಿಲ್ಲಾಡಳಿತಗಳ ಸಭೆ ಮತ್ತು ಸೂಚನೆಗಳನ್ನು ಕಿಂಚಿತ್ತೂ ಲೆಕ್ಕಿಸದೆ, ರೈತರಿಗೆ ಕೊಡಬೇಕಾದ ಹಣ ತಡೆಯುತ್ತಿವೆ ಎಂದು ದೂರಿದ್ದಾರೆ.

ಆಡಳಿತಗಾರರು ಬುದ್ಧರ ಚಿಂತನೆ ಅರಿಯಲಿ

ಕರ್ನಾಟಕ ಬುದ್ಧಧಮ್ಮ ಸಮಿತಿ ಪ್ರಧಾನ ಕಾರ್ಯದರ್ಶಿ ಆರ್.ಮಹದೇವಪ್ಪ

• **ಕನ್ನಡಪ್ರಭ ವಾರ್ತೆ** ಮೈಸೂರು

ಆಡಳಿತಗಾರರಿಗೆ ಜನಸಂಪರ್ಕ ಇರುವುದರಿಂದ ಜನರ ಸಮಸ್ಯೆಗಳನ್ನು ಬಗೆಹರಿಸಲು ಬುದ್ಧರ ಚಿಂತನೆಗಳನ್ನು ಓದಬೇಕು, ಅರ್ಥ ಮಾಡಿಕೊಳ್ಳಬೇಕು ಎಂದು ಕರ್ನಾಟಕ ಬುದ್ಧಧಮ್ಮ ಸಮಿತಿ ಪ್ರಧಾನ ಕಾರ್ಯದರ್ಶಿ ಆರ್. ಮಹದೇವಪ್ಪ ಹೇಳಿದರು.

ವಿಜಯನಗರ 1ನೇ ಹಂತದ ಡಿ. ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆ ಆವರಣದಲ್ಲಿರುವ ಸಿದ್ಧಾರ್ಥ ಬುದ್ಧ ವಿಹಾರದಲ್ಲಿ ಕರ್ನಾಟಕ ಬುದ್ಧಧಮ್ಮ ಸಮಿತಿ ವತಿಯಿಂದ 2,570ನೇ ಭಗವಾನ್ ಬುದ್ಧ ಜಯಂತಿ ಕಾರ್ಯಕ್ರಮದಲ್ಲಿ ಬುದ್ಧರ ಮೂರ್ತಿಗೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು.

ಬುದ್ಧರು ಹೇಳಿದಂತೆ ಜನಪ್ರತಿನಿಧಿ ಅಥವಾ ಉತ್ತಮ ಆಡಳಿತಗಾರನಿಗೆ ತಾಳ್ಮೆ, ಕರುಣೆ, ಪ್ರೀತಿ, ಮೈತ್ರಿ ಇರಬೇಕು. ಆಗಾದಾಗ ಮಾತ್ರ ಉತ್ತಮ ಆಡಳಿತ ನೀಡಲು ಸಾಧ್ಯ. ಹಣ,




ಅಧಿಕಾರ, ಭೂಮಿಗಾಗಿ ಜಗತ್ತಿನದಲ್ಲಿ ಕಿತ್ತಾಟ ನಡೆಯುತ್ತಿದ್ದು, ಇದರಿಂದ ಅಶಾಂತಿಯ ವಾತಾವರಣ ಸೃಷ್ಟಿಯಾಗಿ ಭಯದಿಂದ ಬದುಕುವಂತಾಗಿದೆ. ಜಗತ್ತಿನಲ್ಲಿ ಶಾಂತಿ ನೆಲೆಸಿ ಎಲ್ಲರೂ ಸುಖವಾಗಿರಬೇಕು. ಯುದ್ಧ ನಿಲ್ಲಲ್ಲಿ ಶಾಂತಿ ನೆಲೆಸಲಿ ಎಂಬ ಬುದ್ಧರ ಸಂದೇಶವನ್ನು ಎಲ್ಲೆಡೆ ಪಸರಿಸಬೇಕಿದೆ ಎಂದರು.

ಕಾರ್ಯಕ್ರಮಕ್ಕೂ ಮುನ್ನ ಶ್ರೀಲಂಕಾದ ನವಯಾನ ಫಾರೆಸ್ಟ್ ಮೊನಾಸ್ಟರಿಯ ಬಿಕ್ಕು ಬೋಧಿಧಮ್ಮ ಬಂತೇಜಿ ಅವರು ಬೋಧಿವೃಕ್ಷಕ್ಕೆ ಪೂಜೆ ಸಲ್ಲಿಸಿ ಬುದ್ಧವಂದನೆ ನೆರವೇರಿಸಿದರು. ಸಮಿತಿಯ ಸಹಕಾರ್ಯದರ್ಶಿ ಎಚ್. ಶಿವರಾಜು, ಉಪಾಧ್ಯಕ್ಷ ಪಿ. ಮಹದೇವ್, ಎಂ. ಸಾವಕಯ್ಯ, ಆರ್. ನಟರಾಜು, ಚಿದಂಬರಮೂರ್ತಿ, ಅಹಿಂದ ಜವರಪ್ಪ, ವಾಸು, ನೆಲೆ ಹಿನ್ನಲೆ ಗೋಪಾಲ್, ನಿಸರ್ಗ ಸಿದ್ದರಾಜು, ಲಿಂಗ ರಾಜು, ವಸಂತಕುಮಾರ್, ಮಾ. ನಾಗಯ್ಯ, ಪುಟ್ಟಸ್ವಾಮಿ, ಪುನೀತ್ ಕುಮಾರ್ ಇತರರಿದ್ದರು.

14 ಗ್ರಾಂ ಚಿನ್ನಾಭರಣ ಕಳವು

ಮೈಸೂರು: ಮನೆ ಮಹಡಿಯಿಂದ ಒಳನುಗ್ಗಿದ ಕಳ್ಳರು, ಬೀರುವಿನಲ್ಲಿದ್ದ 14 ಗ್ರಾಂ ಚಿನ್ನಾಭರಣ ದೋಚಿ ದ್ದಾರೆ. ಬನ್ನಿಮಂಟಪದ ನಿವಾಸಿ ನಾತೀಹಾ ಖಾನಂ ಚಿನ್ನ ಕಳೆದುಕೊಂಡವರು. ನಾತೀಹಾ ಖಾನಂ ಅವರು ಕುಟುಂಬ ಸಮೇತ ಸಂಬಂಧಿಕರ ಮನೆಗೆ ತೆರಳಿ, ಮೇ 1ರಂದು ಹಿಂದಿರುಗಿ ದ್ದರು ಬಂದು ನೋಡಿದಾಗ ಚಿನ್ನಾಭರಣ ಕಳ್ಳತನವಾಗಿರುವುದು ಗೊತ್ತಾಗಿದೆ. ಎನ್.ಆರ್. ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಿತ್ರಾವಳಿ



ಹಿಮಾಲಯ ಪ್ರತಿಷ್ಠಾನ, ಎಸ್‌ಎಸ್‌ಜೆಜಿ ಮತ್ತು ಶ್ರೀ ನಿಂಬುಜಾದೇವಿ ಅಮ್ಮನಮ್ಮನವರ ದೇವಸ್ಥಾನ ಟ್ರಸ್ಟ್‌ನಿಂದ ಏರ್ಪಡಿಸಿದ್ದ ಶ್ರೀ ಶಂಕರಾಚಾರ್ಯರ ಜಯಂತಿಯಲ್ಲಿ ಸಿ.ಎನ್. ದಿವಾಕರ್, ಎಂ.ಎಸ್. ರಾಜಶ್ರೀ, ಬಿ. ರಾಘವೇಂದ್ರ, ವಿ. ನಾಗರಾಜು, ಮಧುಸೂದನ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಶಾಸಕ ಟಿ.ಎಸ್. ಶ್ರೀವತ್ಸ, ಡಾ.ಕೆ. ಅನಂತ ರಾಮು, ಕೆ. ರಘುರಾಂ ವಾಜಪೇಯಿ, ಎನ್. ಅನಂತ, ಜನಾರ್ಧನ ಜೆಟ್ಟಿ, ಎಂ. ಕಿರಣ್, ವಾಸುದೇವಕುಮಾರ್, ಗೋಪಿನಾಥ್ ಇದ್ದರು.



ಪ್ರೊ.ಕೆ. ವೆಂಕಟಗಿರಿಗೌಡ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಪರಿಷತ್, ಹನ್ಯಾಳು ಪ್ರಕಾಶನ ಮೈಸೂರಿನ ಸರಸ್ವತಿಪುರಂ ರೋಟರಿ ಪಶ್ಚಿಮ ಸಭಾಂಗಣದಲ್ಲಿ ಭಾನುವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಾಣಿಜ್ಯ ತೆರಿಗೆ ನಿವೃತ್ತ ಹೆಚ್ಚುವರಿ ಆಯುಕ್ತ ಆಲಕೆರೆ ಜೆ. ರಾಮಲಿಂಗೇಗೌಡರು ನಂಬಲಸಾಧ್ಯವಾದ ಸಾಯಿಬಾಬಾ, ನೇತಾಜಿ, ಡೀಪ್ ವರ್ಕ್, ಸಮುದ್ರದತ್ತ ಸವಾರರು ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ಎಚ್.ಎಸ್. ಗೋವಿಂದೇಗೌಡ, ಡಾ.ಬಿ.ಎಸ್. ದಿವ್ಯಾ, ಪ್ರೊ.ಜಿ. ಚಂದ್ರಶೇಖರ್, ರೇಖಾ ಮ್ಯಾಥ್ಯೂ, ಪ್ರಸನ್ನಕುಮಾರ್ ಕೆರೆಗೋಡು, ಎನ್.ಸಿ. ತಮ್ಮಣ್ಣಗೌಡ ಇದ್ದರು.



ಮೈಸೂರಿನ ವಿವಿಧ ಕೇಂದ್ರಗಳಲ್ಲಿ ಭಾನುವಾರ ನೀಟ್ ಪರೀಕ್ಷೆ ನಡೆಯಿತು.

ಕಿವಿಮಾತು | ಧಾರವಾಡ ಕೃಷಿ ವಿಜ್ಞಾನಗಳ ವಿವಿ ಕುಲಪತಿ ಡಾ.ಪಿ.ಎಲ್. ಪಾಟೀಲ್ ಅಭಿಮತ


ನೈಸರ್ಗಿಕ ಕೃಷಿ, ಮಣ್ಣಿನ ಆರೋಗ್ಯ ಕಾಪಾಡುವುದು ಅಗತ್ಯ

• **ಕನ್ನಡಪ್ರಭ ವಾರ್ತೆ** ಸುತ್ತೂರು

ನೈಸರ್ಗಿಕ ಕೃಷಿ ಮತ್ತು ಮಣ್ಣಿನ ಆರೋಗ್ಯ ಕಾಪಾಡುವುದು ಅಗತ್ಯ ಎಂದು ಧಾರವಾಡ ಕೃಷಿವಿಜ್ಞಾನಗಳ ವಿವಿ ಕುಲಪತಿ ಡಾ.ಪಿ.ಎಲ್. ಪಾಟೀಲ್ ಅಭಿಪ್ರಾಯಪಟ್ಟರು.

ಸುತ್ತೂರಿನಲ್ಲಿ ನಡೆದ ರೈತರ ಶಿಬಿರದ ಸಮಾರೋಪದಲ್ಲಿ ಅವರು ಮಾತನಾಡಿದರು.

ರೈತ ದೇಶದ ಬೆನ್ನೆಲುಬು. ಈ ಭೂಮಿಯ ಜೀವನಾಡಿ ರೈತ ಸಮೃದ್ಧಿಯಾಗಿದ್ದರೆ ಮಾತ್ರ ದೇಶ ಸುಭಿಕ್ಷವಾಗಿರುತ್ತದೆ. ಸ್ವಾಭಿಮಾನದ ಕೃಷಿ ನಮ್ಮದಾಗಲಿ. ಜಗತ್ತು ಎಷ್ಟೇ ಆಧುನಿಕವಾದರೂ ಮನುಷ್ಯ ಕಂಪ್ಯೂಟರ್‌ಚಿಪ್ ತಿಂದು ಬದುಕಲಾರ. ಅವನಿಗೆ ಬೇಕಿರುವುದು ರೈತರು ಬೆವರಿಸಿ ಬೆಳೆದ ಅನ್ನದ ತುತ್ತು. ಸೈನಿಕ ದೇಶದ ಗಡಿ ಕಾಯ್ದರೆ, ರೈತ ದೇಶದ ಹಸಿವನ್ನು ನೀಗಿಸುತ್ತಾನೆ. ರೈತರು ಸೋಲಬಾರದು. ಕೇವಲ ಬೆವರಿನಿಂದ ಕೆಲಸ ಮಾಡುವುದಷ್ಟೇ ಅಲ್ಲ, ಜ್ಞಾನದಿಂದ ಕೆಲಸ ಮಾಡಬೇಕು ಎಂದು ತಿಳಿಸಿದರು.



ಸುತ್ತೂರಿನಲ್ಲಿ ನಡೆದ ರೈತರ ಶಿಬಿರದ ಸಮಾರೋಪದಲ್ಲಿ ಧಾರವಾಡ ಕೃಷಿ ವಿಜ್ಞಾನಗಳ ವಿವಿ ಕುಲಪತಿ ಡಾ.ಪಿ.ಎಲ್. ಪಾಟೀಲ್ ಇತರರು ಇದ್ದರು.

ಬೀದರ್ ನ ಕರ್ನಾಟಕ ಪಶುವೈದ್ಯಕೀಯ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿವಿಯ ನಿವೃತ್ತ ವಿಸ್ತರಣ ನಿರ್ದೇಶಕ ಡಾ.ಎಸ್.ಎಂ. ಶಿವಪ್ರಕಾಶ್ ಅವರು ಪ್ರಾಮಾಣಿಕವಾಗಿ ದುಡಿದಾಗ ಪ್ರತಿ ರೈತರು ಯಶಸ್ಸುಗಳಿಸಲು ಸಾಧ್ಯ. ರೈತನ ಮೊಗದಲ್ಲಿ ನಗು ಚಿಮ್ಮಿದಾಗ, ವಿಶ್ವವೇ ಸಂತೋಷ ಪಡುತ್ತದೆ. ಪರಮ ಸಂತೋಷ ಮತ್ತು ಪರಮಶಾಂತಿಯನ್ನು ಪಡೆಯಲು ಜೀವನವನ್ನು ಸರಸಮಯವಾಗಿ ಮತ್ತು ಸಂತೋಷವಾಗಿಡಬೇಕು ಎಂದು ತಿಳಿಸಿದರು.

ಮಂಡ್ಯದ ಕೃಷಿ ವಿಜ್ಞಾನಗಳ ವಿವಿಯ ಸಂಶೋಧನಾ ನಿರ್ದೇಶಕ ಡಾ.ಜಿ.ಎಂ. ದೇವಗಿರಿ ಮಾತನಾಡಿ, ರೈತನ ಬೆವರಿನ ಹನಿ ಭೂಮಿಗೆ ಬಿದ್ದರೆ ಮುತ್ತು ಬೆಳೆಯುತ್ತದೆ, ಆ ಮುತ್ತಿಗೆ ಸರಿಯಾದ ಬೆಲೆ ಸಿಕ್ಕಾಗ ಮಾತ್ರ ಅವನ ಬದುಕು ಚಿನ್ನವಾಗುತ್ತದೆ. ರೈತರು ತಮ್ಮ ಜಮೀನಿನ ಒಂದು ಭಾಗದಲ್ಲಾದರೂ ಹೊಸ ಪ್ರಯೋಗ ಮಾಡಲು ಮುಂದಾಗಬೇಕು. ನಾವು ಬೆಳೆದ ಬೆಳೆಯನ್ನು ಹಾಗೆಯೇ ಮಾರುವ ಬದಲು ಅದಕ್ಕೆ ಮೌಲ್ಯವರ್ಧನೆ ಮಾಡುವುದನ್ನು ತಿಳಿಯಬೇಕು ಎಂದು ಅವರು ಹೇಳಿದರು.

ಬೆಂಗಳೂರಿನ ರಾಜಮುಡಿ ಆರ್ಗೇನಿಕ್ಸ್‌ನ ಕೃಷಿ ಉತ್ಪನ್ನಗಳ ರಫ್ತುದಾರ ಎಚ್. ನಾಗೇಂದ್ರ ಕುಮಾರ್ ಅವರು, ಬೇಡಿಕೆಯಿರುವ ಆಹಾರ ಉತ್ಪನ್ನಗಳನ್ನು ಬೆಳೆಯಬೇಕು. ಉತ್ಪನ್ನಕ್ಕೆ ಬೇಡಿಕೆಯಿರುವ ವಿದೇಶಿ ಮಾರುಕಟ್ಟೆಯನ್ನು ಗುರುತಿಸಬೇಕು. ಅಂತಾರಾಷ್ಟ್ರೀಯ ಮಾರುಕಟ್ಟೆಗೆ ತಕ್ಕಂತೆ ಆಕರ್ಷಕ ಮತ್ತು ಗುಣಮಟ್ಟದ ಪ್ಯಾಕೇಜಿಂಗ್ ಅಗತ್ಯ ಎಂದರು. ಗಣೇಶ್, ಕಾವೇರಮ್ಮ ಬೈಲೆಮನೆ, ಅನಂತ ರಾಮಸ್ವಾಮಿ, ಜಗದೀಶ್ ಎಸ್. ಹಿರೇಮಠ್, ಶಿವಕುಮಾರ್‌ಅನಿಸಿಕೆ ಹಂಚಿಕೊಂಡರು. ಡಾ.ಬಿ.ಎನ್. ಜ್ಞಾನೇಶ್ ಶಿಬಿರದ ವರದಿ ಮಂಡಿಸಿದರು. ಪೃಥ್ವಿ ಪ್ರಾರ್ಥಿಸಿದರು. ಡಾ.ಯು.ಎಂ. ರಕ್ಷಿತ್ ರಾಜ್ ಸ್ವಾಗತಿಸಿದರು. ಡಾ. ದೀಪಕ್ ವಂದಿಸಿದರು. ಡಾ.ವೈ.ಪಿ. ಪ್ರಸಾದ್ ನಿರೂಪಿಸಿದರು.

ಸುದ್ದಿ ಸಿಂಚನ

ವಿಪ್ರ ವಿದ್ಯಾರ್ಥಿಗಳಿಗೆ ಅವಕಾಶ

ಮೈಸೂರು: ಕುವೆಂಪುನಗರದ ಚಿತ್ಕಲ ಟ್ರಸ್ಟ್ ವಿಪ್ರ ಹೊರ ಊರುಗಳಿಂದ ಬಂದು ನಗರದಲ್ಲಿ ವ್ಯಾಸಂಗ ಮಾಡುತ್ತಿದ್ದು, ಊಟದ ವ್ಯವಸ್ಥೆ ಅವಶ್ಯಕತೆ ಇರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪ್ರತಿದಿನ ಬೆಳಗಿನ ಉಪಾಹಾರ, ಮಧ್ಯಾಹ್ನ ಹಾಗೂ ರಾತ್ರಿ ಊಟದ ವ್ಯವಸ್ಥೆಯನ್ನು ವರ್ಷವಿಡೀ ಉಚಿತವಾಗಿ ನೀಡಲಾಗುತ್ತದೆ. ಪಿಯುಸಿ ಅಥವಾ ಮೇಲ್ಪಟ್ಟು ಯಾವುದೇ ಪದವಿ, ವೃತ್ತಿಪರ ಕಾಲೇಜು, ವೇದ ಅಧ್ಯಯನ ಮಾಡುತ್ತಿರುವ, ಹಿಂದಿನ ಪರೀಕ್ಷೆಯಲ್ಲಿ ಶೇ. 60 ಅಂಕಪಡೆದವರಿಗೆ ಈ ಅವಕಾಶವಿದೆ. ಪರೀಕ್ಷಾ ಶುಲ್ಕದ ಸೌಲಭ್ಯವೂ ಇದೆ. ಹೆಚ್ಚಿನ ಮಾಹಿತಿಗೆ ಲಕ್ಷ್ಮೀಪುರಂ ಮೊದಲ ಮುಖ್ಯರಸ್ತೆ, ಗೋವರ್ಧನ ಅಪಾರ್ಟಮೆಂಟ್ ಗೆ ಭೇಟಿ ನೀಡಬಹುದು ಎಂದು ಟ್ರಸ್ಟ್ ಕಾರ್ಯದರ್ಶಿ ಡಿ. ಪ್ರಭಾಕರ್ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ. 94815 29770 ಸಂಪರ್ಕಿಸಬಹುದು.

ಸ್ನಾತಕ ಪದವಿಗೆ ಅರ್ಜಿ ಆಹ್ವಾನ

ಮೈಸೂರು: ಮೈಸೂರು ವಿವಿಯು 2026-27ನೇ ಸಾಲಿನಲ್ಲಿ ಮಹಾರಾಜ, ಯುವರಾಜ ಲಲಿತ ಕಲೆ ಮತ್ತು ವಿವಿ ಸಂಜೆ ಕಾಲೇಜುಗಳಲ್ಲಿನ ಸ್ನಾತಕ ಪದವಿ ಕಾರ್ಯಕ್ರಮಗಳಾದ ಬಿಎ, ಬಿಕಾಂ, ಬಿಎಸ್ಸಿ, ಬಿಬಿಎ ಮತ್ತು ಫೈನ್ಆರ್ಟ್ಸ್ ಗೆ ಪ್ರಥಮ ವರ್ಷಕ್ಕೆ ಪ್ರವೇಶಾತಿ ಪಡೆಯಲು ಯುಯುಸಿಎಂಎಸ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ವಿವಿ ಜಾಲತಾಣ ವಿಳಾಸ www.uni&mysore.ac.in ವೀಕ್ಷಿಸಬಹುದು ಅಥವಾ ಕಾಲೇಜಿನ ಪ್ರಾಂಶುಪಾಲರನ್ನು ಭೇಟಿ ಆಗಬಹುದು ಎಂದು ಕುಲಸಚಿವರು ತಿಳಿಸಿದ್ದಾರೆ.

ಸಾಮೂಹಿಕ ಉಪನಯನ

ಶ್ರೀ ಚಿತ್ಕಲ ಟ್ರಸ್ಟ್ ವತಿಯಿಂದ ವಿಪ್ರ ವಟುಗಳಿಗೆ ಉಚಿತವಾಗಿ ಉಪನಯನ ಕಾರ್ಯಕ್ರಮವನ್ನು ನಾರಾಯಣ ಶಾಸ್ತ್ರಿ ರಸ್ತೆಯ ಹೊಯ್ಸಳ ಕರ್ನಾಟಕ ಸಂಘದಲ್ಲಿ ಮೇ 14 ರಂದು ಆಯೋಜಿಸಲಾಗಿದೆ. ಆಸಕ್ತರು ಮೇ 6 ರೊಳಗೆ ಹೆಸರು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಟ್ರಸ್ಟ್ ಅಧ್ಯಕ್ಷರು, ಕಾರ್ಯ ದರ್ಶಿ ಡಿ. ಪ್ರಭಾಕರ್ ಮೊ. 94815 29770 ಸಂಪರ್ಕಿಸಬಹುದು.

ಅರ್ಜಿ ಆಹ್ವಾನ

ಮೈಸೂರು: ಬೋಗಾದಿ 2ನೇ ಹಂತದ 1ನೇ ಮೇನ್ 1ನೇ ಕ್ರಾಸ್‌ನಲ್ಲಿರುವ ಜೆಎಸ್ಎಸ್ ಮಕ್ಕಳ ವಿದ್ಯಾರ್ಥಿನಿಲಯಕ್ಕೆ ಅರ್ಜಿಗಳನ್ನು ಆಹ್ವಾನಿಸಿದೆ. 5 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಇಲ್ಲಿ ಪ್ರವೇಶಾವಕಾಶವಿರುತ್ತದೆ. ಅರ್ಜಿಯನ್ನು ನೇರವಾಗಿ ಕಚೇರಿಯಿಂದ ಪಡೆಯಬಹುದು ಅಥವಾ ಮೊಬೈಲ್ ನಲ್ಲಿ ಸಂಪರ್ಕಿಸಿದರೆ ವಾಟ್ಸಪ್ ಮೂಲಕ ಕಳುಹಿಸಕೊಡಲಾಗುವುದು. ಮಾಹಿತಿಗಾಗಿ ದೂ. 2548212, ವ್ಯವಸ್ಥಾಪಕ ಕೆ.ಎಸ್. ಗೌರಶಂಕರಸ್ವಾಮಿ, ಮೊ. 9741452271, ಮೊ. 9620501469 ಸಂಪರ್ಕಿಸಬಹುದು.

ವಿಕಲಚೇತನ ಮಕ್ಕಳ ಶಾಲಾ ದಾಖಲಾತಿ

ಮೈಸೂರು: ವಾಗ್ದೇವಿನಗರದ ಟೆಲಿಕಾಂ ಬಡಾವಣೆಯ ಶ್ರೀಮತಿ ಪುಟ್ಟೀರಮ್ಮ ಕಿವುಡು ಹೆಣ್ಣು ಮಕ್ಕಳ ವಸತಿ ಶಾಲೆಗೆ 1 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುವಂತೆ ಶ್ರವಣದೋಷವುಳ್ಳ ಹೆಣ್ಣು ಮಕ್ಕಳನ್ನು 20266-27ನೇ ಸಾಲಿಗೆ ದಾಖಲಾತಿ ಮಾಡಿಕೊಳ್ಳಲಾಗುತ್ತಿದೆ. ಮಾಹಿತಿಗಾಗಿ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್, ಮೊ. 9980057655 ಸಂಪರ್ಕಿಸಬಹುದು.

ಎಸ್.ಮೇಘನಾಗೆ 586 ಅಂಕ

ಮೈಸೂರು: ನಗರದ ಭಾರತೀಯ ವಿದ್ಯಾ ಭವನದ ವಿದ್ಯಾರ್ಥಿನಿ ಎಸ್. ಮೇಘನಾ ಅವರು ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 586 (ಶೇ.93.76) ಅಂಕ ಪಡೆದು ಉನ್ನತ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಸಂಸ್ಕೃತದಲ್ಲಿ 125, ಇಂಗ್ಲಿಷ್95, ಕನ್ನಡ 98, ಗಣಿತ 82, ವಿಜ್ಞಾನ 91 ಹಾಗೂ ಸಮಾಜ ವಿಜ್ಞಾನದಲ್ಲಿ 95 ಅಂಕ ಪಡೆದು, ಶಾಲೆಯ ಅತ್ಯುನ್ನತ ಅಂಕ ಗಳಿಸಿದ ವಿದ್ಯಾರ್ಥಿಗಳಲ್ಲಿ ಒಬ್ಬರಾಗಿದ್ದಾರೆ.

ಶಿಕ್ಷಣ ಸಂಸ್ಥೆಯೊಳಗೆ ಜಾತೀಯತೆ ಆತಂಕಕಾರಿ ವಿಷಯ

ಮೈಸೂರು ವಿವಿ ಕುಲಸಚಿವೆ ಎಂ.ಕೆ. ಸವಿತಾ | ಮಹಾರಾಜ ಕಾಲೇಜಿನಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಶಿಕ್ಷಣಸಂಸ್ಥೆಯೊಳಗೆಜಾತೀಯತೆಹರಡುತ್ತಿರುವುದು ದುರಂತ ಎಂದು ಮೈಸೂರು ವಿವಿ ಕುಲಸಚಿವೆ ಎಂ.ಕೆ. ಸವಿತಾ ತಿಳಿಸಿದರು.

ನಗರದ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಪಠ್ಯೇತರ ಚಟುವಟಿಕೆ ಸಮಿತಿಯುಇತ್ತೀಚೆಗೆಆಯೋಜಿಸಿದ್ದಡಾ.ಬಿ.ಆರ್. ಅಂಬೇಡ್ಕರ್‌ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಣ ಸಂಸ್ಥೆಗಳು ಜಾತ್ಯತೀಯ ಮನೋಭಾವನೆಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಬೇಕು. ಮಾನವೀಯ ಮೌಲ್ಯಗಳ ಸಂಸ್ಕಾರ-ಸಂಸ್ಕೃತಿಯನ್ನು ಮನದಟ್ಟು ಮಾಡುವ ಕೆಲಸ ಮಾಡಬೇಕು ಎಂದರು.

ಜಾತ್ಯತೀತಭಾರತನಿರ್ಮಾಣವೇಡಾ.ಬಿ.ಆರ್. ಅಂಬೇಡ್ಕರ್‌ಅವರು ಆಶಯವಾಗಿದೆ. ಆದರೆ, ಇಂದು ಎಲ್ಲವಲಯಗಳಲ್ಲಿ ಜಾತೀಯತೆ ಹೆಚ್ಚಾಗಿದೆ. ರಾಜಕೀಯ ಮತ್ತು ರಾಜಕಾರಣಿಗಳಲ್ಲಿ ಜಾತೀಯತೆ, ಮತೀಯತೆ ಹೆಚ್ಚಾಗಿದೆ ಎಂದು ಅವರು ಕಳವಳ ವ್ಯಕ್ತಪಡಿಸಿದರು.



ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇತ್ತೀಚೆಗೆ ನಡೆದ ಡಾ.ಬಿ.ಆರ್. ಅಂಬೇಡ್ಕರ್‌ಜಯಂತಿಯನ್ನು ಮೈಸೂರು ವಿವಿ ಕುಲಸಚಿವೆ ಎಂ.ಕೆ. ಸವಿತಾ ಉದ್ಘಾಟಿಸಿದರು.

ಡಾ. ಅಂಬೇಡ್ಕರ್ ಅಸ್ಪೃಶ್ಯತೆ ನಡುವೆ ಸಾಧಿಸಿದ್ದಾರೆ. ಅವರ ಬಳಿಕ ಇಷ್ಟು ಸಮಯವಾದರೂ ಆ ಸ್ಥಾನ ತುಂಬಲು ಯಾರಿಂದಲೂ ಸಾಧ್ಯವಾಗಿಲ್ಲ. ಅವರಲ್ಲಿದ್ದ ಅಧ್ಯಯನ, ಕಾನೂನಿನ ಜ್ಞಾನ ಅವರನ್ನು ಇಂದಿಗೂ ಜೀವಂತವಾಗಿ ಇರಿಸಿದೆ. ನಮಗೆ ಇಷ್ಟೊಂದು ಸೌಲಭ್ಯ ಇರುವಾಗ ಅವರ ಹಾದಿಯಲ್ಲಿ ಸಾಗಲು ಯಾಕೆ ಸಾಧ್ಯವಿಲ್ಲ? ಗ್ರಾಮೀಣ ಪ್ರದೇಶಗಳಿಂದ ಬರುವ ಮಕ್ಕಳಿಗೆ ಅಂಬೇಡ್ಕರ್‌ಜೀವನ ಕಥೆಗಳ ಮೂಲಕ ಸ್ಫೂರ್ತಿ ತುಂಬುವ ಅಗತ್ಯವಿದೆ.

> **ಭಾರತೀಯರ ಹಾಕಿರುವ ಮೆದುಳಿನ ಬೇಡಿಗಳನ್ನು ಕಳಚುವ ಕೆಲಸ ಮಾಡಿದ ಮಹನೀಯರು ಡಾ. ಅಂಬೇಡ್ಕರ್. ಅವರು ಶಿಕ್ಷಣದ ಎಲ್ಲಾ ಆಯಾ ಮಗಳನ್ನು ಅರಿತುಕೊಂಡಿದ್ದರು. ಅವರು ಓದಿದ ವಿಶ್ವವಿದ್ಯಾಲಯಗಳಿಗೂ ಅವರ ಮೇಲೆ ಹೆಮ್ಮೆ ಇದೆ. ಕೊಲಂಬಿಯಾ ವಿಶ್ವವಿದ್ಯಾಲಯವೇ ಇದನ್ನು ದಾಖಲಿಸಿಕೊಂಡಿದೆ.**
> • **ಪ್ರೊ.ಡಿ. ಆನಂದ** ನಿವೃತ್ತ ಪ್ರಾಧ್ಯಾಪಕರು

ಪ್ರತಿಯೊಬ್ಬ ವಿದ್ಯಾರ್ಥಿಯು ಅಂಬೇಡ್ಕರ್‌ಜೀವನ ಚರಿತ್ರೆಯನ್ನು ಓದುವ ಕೆಲಸವಾಗಬೇಕು ಎಂದು ಅವರು ಹೇಳಿದರು.

ನಿವೃತ್ತ ಪ್ರಾಧ್ಯಾಪಕ ಡಾ.ಡಿ. ಆನಂದ ಮಾತನಾಡಿ, ದೇಶವು ಅಂಬೇಡ್ಕರ್ ಅವರನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳಲಿಲ್ಲ. ಸ್ವಾತಂತ್ರ್ಯಕ್ಕೂ ಮುನ್ನ ಅವರನ್ನು ನಿಮ್ಮ ವರ್ಗಗಳ ನಾಯಕ ಎಂದು ಮಾತ್ರ ಗುರುತಿಸಲಾಯಿತು. ಸ್ವಾತಂತ್ರ್ಯಾ ನಂತರ ಸಂವಿಧಾನ ಶಿಲ್ಪಿ ಎಂಬ ಗೌರವ ದೊರಕಿದರೂ, ಅವರ ವಿದ್ವತ್ತಿನ ಸಂಪೂರ್ಣ ಪ್ರಯೋಜ ಪಡೆಯಲಿಲ್ಲ. ಇಂತಹ ಮಹಾನ್ ಚಿಂತಕ ಬೇರೆ ದೇಶದಲ್ಲಿ ಹುಟ್ಟಿದ್ದರೇ ಅವರ ಜ್ಞಾನವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಬಳಸಿಕೊಂಡಿರುತ್ತಿದ್ದರು ಎಂದು ತಿಳಿಸಿದರು. ಮಹಾರಾಜ ಕಾಲೇಜಿನ ಪ್ರಾಂಶುಪಾಲ ಪ್ರೊ. ವಿ. ಷಣ್ಮುಗಂ, ಆಡಳಿತಾಧಿಕಾರಿ ಪ್ರೊ.ಕೆ.ಎಸ್. ಗೋವಿಂದರಾಜು, ಪಠ್ಯೇತರ ಚಟುವಟಿಕೆಗಳ ಸಮಿತಿಯ ಸಂಚಾಲಕ ಪ್ರೊ. ರಾಚಯ್ಯ ಇತರರಿದ್ದರು.

ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಗೆ ಸಾಂಸ್ಕೃತಿಕ ವೇದಿಕೆ ಅತೀ ಅಗತ್ಯ

ಸೇಂಟ್ ಥಾಮಸ್ ಎಜುಕೇಶನ್ ಸೊಸೈಟಿ ಮಾಜಿ ಅಧ್ಯಕ್ಷ ಡಾ. ಆಗಸ್ಟಿನ್ ಕ್ರೈಸ್ಟ್ ಕಾಲೇಜಿನಲ್ಲಿ ವಾರ್ಷಿಕ ಸಾಂಸ್ಕೃತಿಕ ಹಬ್ಬ ಫಿಯೆಸ್ಟಾ2ಕೆ26 ಕಾರ್ಯಕ್ರಮ



• **ಕನ್ನಡಪ್ರಭ ವಾರ್ತೆ** ಮೈಸೂರು

ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಗೆ ಇಂತಹ ಸಾಂಸ್ಕೃತಿಕ ವೇದಿಕೆಗಳು ಅಗತ್ಯ ಎಂದು ಸೆಂಟ್ ಥಾಮಸ್ ಎಜುಕೇಶನ್ ಸೊಸೈಟಿ ಮಾಜಿ ಅಧ್ಯಕ್ಷ ಫಾ. ಡಾ. ಆಗಸ್ಟಿನ್ ತಿಳಿಸಿದರು.

ಶ್ರೀರಾಂಪುರದ ಕ್ರೈಸ್ಟ್ ಕಾಲೇಜಿಲ್ಲಿ ಇತ್ತೀಚೆಗೆ ಏರ್ಪಡಿಸಿದ್ದ ವಾರ್ಷಿಕ ಸಾಂಸ್ಕೃತಿಕ ಹಬ್ಬ ಫಿಯೆಸ್ಟಾ 2ಕೆ26- ದಶಮಾನೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಂಸ್ಥೆಯನ್ನು ಶ್ರೇಷ್ಠತೆಯ ಕೇಂದ್ರವಾಗಿ ರೂಪಿಸುವಲ್ಲಿ ಎದುರಾದ ಸವಾಲುಗಳನ್ನು ಅವರು ಉಲ್ಲೇಖಿಸಿ, ಮೌಲ್ಯಾಧಾರಿತ ಶಿಕ್ಷಣದ ಅಗತ್ಯ ಹೆಚ್ಚಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸೆಂಟ್ ಥಾಮಸ್ ಎಜುಕೇಶನ್ ಸೊಸೈಟಿ ಅಧ್ಯಕ್ಷ ಫಾ. ಜೋಬಿ ಕುನ್ನತ್ ಮಾತನಾಡಿ, ವಿದ್ಯಾರ್ಥಿಗಳಿಗೆ ಉತ್ತಮ ಮೌಲ್ಯಗಳನ್ನು ಕಾಪಾಡಿಕೊಂಡು ಶ್ರೇಷ್ಠತೆಯತ್ತ ಮುನ್ನಡೆಯಬೇಕು. ಅಲ್ಲದೆ, 'ವಸುದೈವ ಕುಟುಂಬಕಂ' ಎಂಬ ಮಾತಿನಂತೆ ವೇದಗಳು ಮತ್ತು ಉಪನಿಷತ್ತುಗಳ ಮಹತ್ವವನ್ನು ವಿವರಿಸಿದರು.

ಕಾಲೇಜಿನ ವಿದ್ಯಾರ್ಥಿಗಳು ಪ್ರಾರ್ಥನಾ ನೃತ್ಯ ನಡೆಸಿಕೊಟ್ಟರು. ಬಳಿಕ ಗಣ್ಯರು ಸಾಂಪ್ರದಾಯಿಕವಾಗಿ ದೀಪ ಬೆಳಗಿಸಿದರು. ಕಾಲೇಜಿನ ಪ್ರಾಂಶುಪಾಲ ಫಾ. ಜಿಂಟೋ ಜೋಸ್ ಅವರು ಸ್ವಾಗತ ಭಾಷಣದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಸಂಸ್ಥೆಯ ಬೆಳವಣಿಗೆ ಮತ್ತು ದೃಷ್ಟಿಕೋನವನ್ನು ವಿವರಿಸಿದರು.

ಪೋಷಕರ ಪರವಾಗಿ ರವಿ ಹುಲ್ಕೋಟಿ ಮಾತನಾಡಿ, ಸಂಸ್ಥೆಯ ಪ್ರಗತಿ ಮತ್ತು ವಿದ್ಯಾರ್ಥಿಗಳ ಸಾಧನೆ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾಲೇಜಿನ ವ್ಯೂ ಬುಕ್ ಬಿಡುಗಡೆಗೊಳಿಸಲಾಯಿತು. ನಂತರ ಗಣ್ಯರು, ಕ್ರೈಸ್ಟ್ ಮೀಡಿಯಾ ಸಂಯೋಜಕಿ ಎಸ್. ಶಿಲ್ಪಾ ಮತ್ತು ವಿದ್ಯಾರ್ಥಿ ಸಂಯೋಜಕಿ ಎಂ.ಎನ್. ಅನುಷಾ ಹಾಗೂ ಜೆಜ್ನೀಲ್ ಲೋಮಿಯೋ ಅವರು ಕ್ರಿಸ್ಟೋಸ್ ವಾರ್ಷಿಕ ವಿಶೇಷ ಸಂಚಿಕೆ ಅನಾವರಣಗೊಳಿಸಿದರು.

ಕಾಲೇಜಿನ ಶೈಕ್ಷಣಿಕ ಸಾಧನೆ ಪರಿಚಯಿಸುವ ವಿಡಿಯೋ ಪ್ರದರ್ಶನ ಹಾಗೂ ಕಳೆದ ದಶಕದಲ್ಲಿ ಸಂಸ್ಥೆಗೆ ಮಹತ್ವದ ಕೊಡುಗೆ ನೀಡಿದ ಮಹನೀಯರಿಗೆ ಸಮರ್ಪಿತ ವಿಶೇಷ ವಿಡಿಯೋ ಕೂಡ ಪ್ರದರ್ಶಿಸಲಾಯಿತು.

ಶೈಕ್ಷಣಿಕ ಹಾಗೂ ಪಠ್ಯೇತರ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿಭಾಗ ಮಟ್ಟದ ಟಾಪರ್‌ಗಳನ್ನು ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ಸಂಭ್ರಮಕ್ಕೆ ಹೊಸ ಚೈತನ್ಯ ನೀಡಿದವು. ಕಾಲೇಜು ಗಾಯಕ ವೃಂದದ ಸಂಗೀತ ಕಾರ್ಯಕ್ರಮದ ಬಳಿಕ ವಿವಿಧ ವಿಭಾಗಗಳ ವಿದ್ಯಾರ್ಥಿಗಳು ನೀಡಿದ ನೃತ್ಯ ಪ್ರದರ್ಶನ ಸೃಜನಶೀಲತೆ ಮತ್ತು ವೈವಿಧ್ಯತೆಯನ್ನು ಪ್ರತಿಬಿಂಬಿಸಿತು.

ಶಿಬಿರಗಳು ಮಕ್ಕಳ ಬಲವರ್ಧನೆಯ ಸಮಾಜಮುಖಿ ಕಾರ್ಯಕ್ರಮಗಳಾಗಿವೆ

ಶಿಬಿರದಲ್ಲಿ ಮಹಿಳಾ ಹೋರಾಟಗಾರ್ತಿ ಪ್ರೊ. ಲತಾ ಅಭಿಮತ

• **ಕನ್ನಡಪ್ರಭ ವಾರ್ತೆ** ಮೈಸೂರು

ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜನುಮದಿನ ಅಂಗವಾಗಿ ವಿ ಕೇರ್‌ಸಂಸ್ಥೆಯು ಮಕ್ಕಳಿಗಾಗಿ ಒಳಗೊಳ್ಳುವಿ ಕೆಯ ಜೀವನದ ಆಶಯ ಹೊತ್ತ ಉಚಿತ ಬೇಸಿಗೆ ಶಿಬಿರ ನಡೆಸಿತು.

ಬೇಸಿಗೆ ಶಿಬಿರವನ್ನು ಮಕ್ಕಳಿಗೆ ಅರ್ಪಿಸುವ ಮೂಲಕ ಈ ದಿನವನ್ನು ಅರ್ಥಪೂರ್ಣವಾಗಿ ಆಚರಿಸಿಕೊಂಡಿತು. ಸಮತಾ ವೇದಿಕೆ ಹಿರಿಯ ಸದಸ್ಯ ಪ್ರೊ. ಲತಾ ಬಿದ್ದಪ್ಪ, ಬಿಇಒ ಪ್ರಕಾಶ್, ಆಂಗ್ಲ ಪ್ರೊ.ಕೆ.ಪಿ. ವಾಸುದೇವನ್ ಅವರು ಮಕ್ಕಳೊಡನೆ ಸೇರಿ ಶಿಬಿರದ ಲಾಂಛನ ಅನಾವರಣಗೊಳಿಸಿದರು.

ಮಹಿಳಾ ಹೋರಾಟಗಾರ್ತಿ ಪ್ರೊ. ಲತಾ ಬಿದ್ದಪ್ಪ ಶಿಬಿರ ಉದ್ಘಾಟಿಸಿ ಮಾತನಾಡಿ, ಶಿಬಿರಗಳು ಮಕ್ಕಳ ಬಲವರ್ಧನೆಯ ಸಮಾಜಮುಖಿ ಕಾರ್ಯಕ್ರಮಗಳಾಗಿವೆ. ಈ ಪ್ರಯತ್ನಕ್ಕೆ ಸಮಾಜದ ಒಳ್ಳೆಯ ಮನಸ್ಸುಗಳು ಬೆನ್ನು ಕಟ್ಟಿ ನಿಲ್ಲಬೇಕಿದೆ. ಮಕ್ಕಳಿಗೆ ಹಿರಿಯರಿಂದ ಮೌಲ್ಯಾಧಾರಿತ ಶಿಬಿರಗಳು, ಪಠ್ಯೇತರ ಚಟುವಟಿಕೆಗಳನ್ನು ಏರ್ಪಡಿಸುವುದರಿಂದ ಮಕ್ಕಳು ಆತ್ಮವಿಶ್ವಾಸಭರಿತರಾಗಿ ಸಮಾಜದ ಬಗ್ಗೆ ನಂಬಿಕೆ ಹೊಂದುತ್ತಾ ಸಾಮರ್ಥ್ಯ ಹೆಚ್ಚಿಸಿಕೊಳ್ಳುತ್ತಾರೆ ಎಂದರು.

ನಿವೃತ್ತ ಆಂಗ್ಲ ಪ್ರಾಧ್ಯಾಪಕ ಕೆ.ಪಿ. ವಾಸುದೇವನ್ ಮಾತನಾಡಿ, ನಮ್ಮ ಪರಿಸರದಲ್ಲಿ ಮಕ್ಕಳಿಗಾಗಿ ಇಂತಹ ಮೌಲ್ಯಾಧಾರಿತ ಸಾಂಸ್ಕೃತಿಕ ಶಿಬಿರಗಳು ತಿಳುವಳಿಕೆ ಇರುವ ಮನಸುಗಳಿಂದ ನಡೆಯುತ್ತಿರುವುದು ನಿಜಕ್ಕೂ ಅಭಿನಂದನಾರ್ಹ ಕಾರ್ಯ. ಇವುಗಳ ಅಗತ್ಯ ನಮ್ಮ ದೇಶಕ್ಕೆ ಇಂದು ಹೆಚ್ಚುತ್ತಿರುವುದನ್ನು ನಾವು ಮನಗಾಣಬೇಕಿದೆ. ಸಾರ್ವಜನಿಕರು ತಮ್ಮ ಧಾರ್ಮಿಕ ಕಾರ್ಯಕ್ರಮಗಳಿಗೆ ಹೆಚ್ಚು ಒತ್ತು ನೀಡಿ ತಮ್ಮೆಲ್ಲಾ ಸಂಪನ್ಮೂಲಗಳನ್ನು ಧಾರೆ ಎರೆಯುತ್ತಾರೆ ಎಂದರು.



ವಿ ಕೇರ್‌ಸಂಸ್ಥೆಯು ಮಕ್ಕಳಿಗಾಗಿ ಒಳಗೊಳ್ಳುವಿ ಕೆಯ ಜೀವನದ ಆಶಯ ಹೊತ್ತ ಉಚಿತ ಬೇಸಿಗೆ ಶಿಬಿರ ನಡೆಸಿತು.ಮಹಿಳಾ ಹೋರಾಟಗಾರ್ತಿ ಪ್ರೊ. ಲತಾ ಉಪಸ್ಥಿತರಿದ್ದರು.

ವಿ ಕೇರ್‌ಸಂಸ್ಥೆಯ ಸಂಸ್ಥಾಪಕಿ ಡಾ. ಕುಮುದಿನಿ ಅಚ್ಚಿ ಮಾತನಾಡಿ, ಮಕ್ಕಳ ಶಿಬಿರಗಳನ್ನು ಸಂಸ್ಥೆಯು ಉಚಿತವಾಗಿ ಸ್ವತಂತ್ರವಾಗಿ ಕಳೆದ 13 ವರ್ಷಗಳಿಂದ ನಡೆಸಿಕೊಂಡು ಬರುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರೊ. ಶಶಿಕಲಾ, ಹಿರಿಯ ಪತ್ರಕರ್ತ ಅಯ್ಯಪ್ಪ ಹೂಗಾರ, ಒಡನಾಡಿ ಸ್ಟ್ಯಾನ್ಲಿ, ಬರಹಗಾರ ಶ್ರೀಪಾದ ಹೆಗಡೆ, ರಂಗಕರ್ಮಿ ಜಯಶ್ರೀ ಹೆಗಡೆ ಮೊದಲಾದವರು ಇದ್ದರು.

ಅನಿಕೇತನ ಸೇವಾ ಟ್ರಸ್ಟ್‌ನಿಂದ ಕಾಯಕ ಸೇವಾ ಪ್ರಶಸ್ತಿ

• **ಕನ್ನಡಪ್ರಭ ವಾರ್ತೆ** ಮೈಸೂರು

ಅನಿಕೇತನ ಸೇವಾ ಟ್ರಸ್ಟ್ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸೆಸ್ಕ್‌ನ ನಿವೃತ್ತ ಎಂಡಿ ಮುನಿಗೋಪಾಲರಾಜು ಮತ್ತು ಪುಟ ವಿನ್ಯಾಸಕ ಸಂದೇಶ್ ಅವರಿಗೆ ಕಾಯಕ ಸೇವಾ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಎಂಡಿಎ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್, ಮಾಜಿ ಮೇಯರ್‌ಬಿ.ಎಲ್. ಭೈರಪ್ಪ, ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್ ಪ್ರಶಸ್ತಿ ನೀಡಿ ಅಭಿನಂದಿಸಿದರು.

ಈ ವೇಳೆ ಮಾತನಾಡಿದ ಎಚ್.ವಿ. ರಾಜೀವ್, ಅನಿಕೇತನ ಸೇವಾ ಟ್ರಸ್ಟ್ ವತಿಯಿಂದ ಪ್ರಶಸ್ತಿಗೆ ಸೂಕ್ತ ವ್ಯಕ್ತಿಗಳನ್ನು ಆಯ್ಕೆ ಮಾಡಿದ್ದಾರೆ. ಟ್ರಸ್ಟ್ ಅಧ್ಯಕ್ಷ ಕೆ.ವಿ. ಮಲ್ಲೇಶ್ ಒಳ್ಳೆ ಕೆಲಸವನ್ನು ಮಾಡುವವರನ್ನು ಗುರುತ್ತಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಮೈಸೂರಿನ ಪತ್ರಕರ್ತರ ಸಂಘದಲ್ಲಿ ಭಾನುವಾರ ಅನಿಕೇತನ ಸೇವಾ ಟ್ರಸ್ಟ್‌ನ ಕಾರ್ಯಕ್ರಮದಲ್ಲಿ ಸೆಸ್ಕ್ ನಿವೃತ್ತ ಎಂಡಿ ಮುನಿಗೋಪಾಲರಾಜು ಮತ್ತು ಪುಟ ವಿನ್ಯಾಸಕ ಸಂದೇಶ್ ಅವರಿಗೆ ಕಾಯಕ ಸೇವಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ಶ್ರೀಹರಿ ದ್ವಾರಕನಾಥ್, ರಾಜೀವ್, ಅಯೂಬ್‌ಖಾನ್, ಬಿ.ಎಲ್. ಭೈರಪ್ಪ ಇತರರಿದ್ದರು.

ಮುನಿಗೋಪಾಲರಾಜು ಅವರ ಕೆಲಸವನ್ನು ತಾಂತ್ರಿಕವಾಗಿ ಅರಿತುಕೊಳ್ಳಬೇಕು. ಅವರು ಮೈಸೂರಿನಲ್ಲಿ ಸಾಕಷ್ಟು ಸಾಧನೆ ಮಾಡಿದ್ದಾರೆ. 60 ಸ್ಟೇಷನ್‌ಗಳನ್ನು ನಿರ್ಮಾಣ ಮಾಡಿದ್ದಾರೆ. ದಸರಾ ಜಂಬೂಸವಾರಿ ನಡುವೇ ದೀಪಾಲಂಕಾರಕ್ಕೆ ಹೆಚ್ಚಿನ ಮೆರಗು ಬರುವಂತೆ ನೋಡಿಕೊಂಡು ಎಲ್ಲರ ಮೆಚ್ಚಗೆಗಳಿಸಿ ತಮ್ಮ ಹೆಗ್ಗುರುತ್ತನ್ನು ಮೂಡಿಸಿದ್ದಾರೆ. ಸರ್ಕಾರ ಇವರನ್ನು ಯಾವುದಾದರೂ ಸಲಹಾ ಸಮಿತಿಗೆ ನೇಮಕ ಮಾಡುವಂತೆ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸುತ್ತೇನೆ ಎಂದರು.

ಸಂದೇಶ್ ತಮ್ಮ ಉತ್ತಮ ಪುಟ ವಿನ್ಯಾಸದ ಮೂಲಕವೇ ಗುರುತಿಸಿಕೊಂಡಿದ್ದು ರಾಜ್ಯ ಪ್ರಶಸ್ತಿ ತಮ್ಮದಾಗಿಸಿಕೊಂಡಿದ್ದಾರೆ. ಯಾವುದೇ ಆಡಂಬರವಿಲ್ಲದೇ ಗೌಪ್ಯವಾಗಿ ಕೆಲಸ ಮಾಡಿ ಗುರುತಿಸಿಕೊಂಡಿದ್ದಾರೆ. ನೈಜ್ಯ ಪತ್ರಕರ್ತರಿಗೆಸವಾಲುಗಳಿಗೆಈಸವಾಲುಗಳ ನಡುವೇ ಉತ್ತಮ ಕೆಲಸ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಮೂಗೂರು ನಂಜುಂಡಸ್ವಾಮಿ, ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ. ಶ್ರೀಧರ್, ಜಿಎಸ್ಎಸ್ ಸಮೂಹ ಸಂಸ್ಥೆಯ ಸಂಸ್ಥಾಪಕ ಹಾಗೂ ಯೋಗಾತ್ಮ ಶ್ರೀಹರಿ ದ್ವಾರಕನಾಥ್ ಮೊದಲಾದವರು ಇದ್ದರು.

ಮಂಡ್ಯದಲ್ಲಿ ಕೈಗಾರಿಕೆ ಸ್ಥಾಪಿಸಲು ವಿಳಂಬ ಧೋರಣೆ ಆರೋಪ

ನಗರ ಕಾಂಗ್ರೆಸ್ ಸಮಿತಿಯವರು ಆರ್‌ಟಿಒ ವೃತ್ತದಲ್ಲಿ ಪ್ರತಿಭಟನೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಮಂಡ್ಯದಲ್ಲಿ ಕೈಗಾರಿಕೆ ಸ್ಥಾಪನೆ ಮಾಡಲು ರಾಜ್ಯ ಕಾಂಗ್ರೆಸ್ ಸರ್ಕಾರ 100 ಎಕರೆ ಜಮೀನು ಗುರುತಿಸಿದ್ದರೂ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಕೈಗಾರಿಕೆ ಸ್ಥಾಪನೆ ಮಾಡಲು ವಿಳಂಬ ಧೋರಣೆ ಅನುಸರಿಸುತ್ತಿದ್ದಾರೆ ಎಂದು ಆರೋಪಿಸಿ ನಗರ ಕಾಂಗ್ರೆಸ್ ಸಮಿತಿಯವರು ಆರ್.ಟಿಒ ವೃತ್ತದಲ್ಲಿ ಪ್ರತಿಭಟಿಸಿದರು.

ಮಂಡ್ಯ ಶಾಸಕ ಗಣಿಗ ರವಿ ಅವರು ವಿ.ಸಿ. ಫಾರ್ಮ್, ಅಮರಾವತಿ ಹೊಟೇಲ್ ಮುಂಭಾಗ ಕೈಗಾರಿಕೆ ಸ್ಥಾಪನೆಗೆ ಜಾಗ ಗುರುತಿಸಿದ್ದರೂ ಎಚ್.ಡಿ. ಕುಮಾರಸ್ವಾಮಿ ಅವರು ಕಾಟಾಚಾರಕ್ಕೆ ಅಧಿಕಾರಿಗಳನ್ನು ಕಳುಹಿಸಿ ಮೌನ ವಹಿಸಿದ್ದಾರೆ. ಬಜೆಟ್ ನಲ್ಲಿ ಸಿದ್ದರಾಮಯ್ಯ ಅವರು ಮಂಡ್ಯದಲ್ಲಿ 100 ಎಕರೆ ಜಮೀನು ಕೊಡಲು ಘೋಷಿಸಿದ್ದಾರೆ. ಆದರೆ, ಕುಮಾರಸ್ವಾಮಿ ಅವರು ಕೈಗಾರಿಕೆ ಸ್ಥಾಪನೆಗೆ ಚಾಲನೆ ನೀಡಲು ಮೀನಾಮೇಷ ಎಣಿಸುತ್ತಿದ್ದಾರೆ ಎಂದು ಅವರು ದೂರಿದರು.

ಕುಮಾರಸ್ವಾಮಿ ಅವರಿಗೆ ಮಂಡ್ಯ ಜನಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಮನಸ್ಥಿತಿ ಇಲ್ಲ. ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು, ಜನಪ್ರತಿನಿಧಿಗಳ ಸಭೆ ಕರೆದು, ಕೈಗಾರಿಕಾ ಯೋಜನೆಗಳ ಸ್ಥಾಪನೆ ಬಗ್ಗೆ ಚರ್ಚಿಸದೇ ಕಾಲಾಹರಣ ಮಾಡುತ್ತಿದ್ದಾರೆ ಎಂದು ಅವರು ಆರೋಪಿಸಿದರು.

ಕನಕಪುರ, ರಾಮನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಕುಡಿಯುವ ನೀರಿಗಾಗಿ ಮೇಕೆದಾಟು ಯೋಜನೆಯನ್ನು ರಾಜ್ಯ ಸರ್ಕಾರ ಕೈಗೆತ್ತಿಕೊಂಡಿದೆ. ಡಿ.ಕೆ. ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಈಗಾಗಲೇ ಈ ಯೋಜನೆಗೆ ಡಿಪಿಆರ್ ಸಿದ್ಧಪಡಿಸಿದ್ದಾರೆ. ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಭೂಮಿ ಸರ್ವೆ, ಮರಗಳ ಎಣಿಕೆಗೆ ಚಾಲನೆ ನೀಡಲಾಗಿದೆ. ಹಲವಾರು ಟಿಎಂಸಿ ನೀರು ಸಮುದ್ರ ಪಾಲಾಗುತ್ತಿದೆ. ಈ ನೀರನ್ನು ಉಪಯೋಗಿಸಿಕೊಂಡು ಕುಡಿಯುವ ನೀರಿಗೆ ಬಳಸಿಕೊಳ್ಳಲು, ವಿದ್ಯುತ್ ಉತ್ಪಾದನೆ ಮಾಡಲು ಈ ಯೋಜನೆ ಕೈಗೆತ್ತಿಕೊಂಡಿದೆ. ರಾಜ್ಯದ ನೆಲ, ಜಲದ ಪರವಾಗಿ ಕುಮಾರಸ್ವಾಮಿ ಪ್ರಮಾಣಿಕವಾಗಿ ಕೆಲಸ ಮಾಡದೆ ಕೇಂದ್ರ ನೀರಾವರಿ ಸಚಿವರು, ಪ್ರಧಾನಮಂತ್ರಿಯವರ ಮನ ಒಲಿಸುವಲ್ಲಿ ವಿಫಲರಾಗಿದ್ದಾರೆ ಎಂದು ಅವರು ದೂರಿದರು.

ಕಾಂಗ್ರೆಸ್ ನಗರ ವಕ್ತಾರ ಎಸ್. ರಾಜೇಶ್, ಮುಖಂಡರಾದ ರಾಜಶೇಖರ್, ಯೋಗೇಶ್ ಉಪ್ಪಾರ, ಧನಪಾಲ್, ಸುನಿಲ್ ನಾರಾಯಣ್, ರವಿನಾಯಕ, ಬಾಬು, ಮೋಹನ್ ಕುಮಾರ್, ರದಿಉಲ್ಲಾ ಖಾನ್, ಸೈಯದ್ ಫಾರೂಕ್, ಮಹೇಶ್ ಇತರರು ಇದ್ದರು.

ವೈ.ಎಸ್. ಅಭಿಷೇಕ್‌ಗೆ ಪಿಎಚ್.ಡಿ ಪದವಿ

ಮೈಸೂರು: ಡಾ.ಎಸ್.ಡಿ. ಶಶಿಕಲಾ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿದ ವೈ.ಎಸ್. ಅಭಿಷೇಕ್ ಅವರು ಸಾದರಪಡಿಸಿದ ''ಆಯ್ದ ಕನ್ನಡ ಮಹಿಳಾ ಕಾದಂಬರಿ ಆಧಾರಿತ ಚಲನಚಿತ್ರಗಳು: ಬಹುಮುಖಿ ಚಿಂತನೆ'' ಎಂಬ ಮಹಾಪ್ರಬಂಧವನ್ನು ಕನ್ನಡ ವಿಷಯದಲ್ಲಿ ಪಿಎಚ್.ಡಿ ಪದವಿಗಾಗಿ ಮೈಸೂರು ವಿವಿ ಅಂಗೀಕರಿಸಿದೆ.

ವೈದ್ಯೋ ನಾರಾಯಣೋ ಹರಿ | **ಕುವೆಂಪು ಡಾಕ್ಟರ್, ಕಾಮನ್ ಮ್ಯಾನ್ ಡಾಕ್ಟರ್ ಡಾ.ವಿ. ಲಕ್ಷ್ಮೀನಾರಾಯಣ್ ಉತ್ತರ**

ಮಧುಮೇಹ ಸಂಪೂರ್ಣವಾಗಿ ವಾಸಿ ಮಾಡಬಹುದೇ?

• **ಕನ್ನಡಪ್ರಭ ವಾರ್ತೆ** ಮೈಸೂರು

ಮಧುಮೇಹವನ್ನು ಸಂಪೂರ್ಣವಾಗಿ ವಾಸಿ ಮಾಡಬಹುದೇ? ಎಂಬುದಕ್ಕೆ ಖ್ಯಾತ ಮಧುಮೇಹತಜ್ಞ ಡಾ.ವಿ. ಲಕ್ಷ್ಮೀನಾರಾಯಣ್ ತಮ್ಮದೇ ಆದ ರೀತಿಯಲ್ಲಿ ಪ್ರತಿಕ್ರಿಯೆ ನೀಡಿದ್ದಾರೆ.

''ಮಧುಮೇಹ ವಿಶ್ವದ ಅಗೋಚರ ಶತ್ರು'' ಎಂಬ ಕೃತಿಯನ್ನು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಬರೆದಿರುವ ಡಾ.ಲಕ್ಷ್ಮೀ ನಾರಾಯಣ್ ಅವರು ರಾಷ್ಟ್ರಕವಿ ಕುವೆಂಪು ಅವರ ಜೀವಿತ ಕಾಲದಲ್ಲಿ ಕೊನೆಯ ಹತ್ತು ವರ್ಷಗಳ ಕಾಲ ಆರೋಗ್ಯದ ಉಸ್ತುವಾರಿ ನೋಡಿಕೊಂಡವರು. ಸರ್ಕಾರಿ ಸೇವೆಯಲ್ಲಿದ್ದಾಗ ಗ್ರಾಮೀಣ ಪ್ರದೇಶದಲ್ಲಿ ಬಡಜನರ ಸೇವೆ ಮಾಡುತ್ತಾ ''ಕಾಮನ್ ಮ್ಯಾನ್ ಡಾಕ್ಟರ್'' ಎಂದೇ ಹೆಸರಾದವರು. ಸರ್ಕಾರಿ ಸೇವೆ ತ್ಯಜಿಸಿ, ಖಾಸಗಿ ಪ್ರಾಕ್ಟೀಸ್ ಮಾಡುತ್ತಿರುವ ಅವರು ಈ 80ರ ಇಳಿ ವಯಸ್ಸಿನಲ್ಲಿಯೂ ತಮ್ಮ ಸರಳ, ಸಜ್ಜನಿಕೆ, ಚಿಕಿತ್ಸೆಗೆ ಬರುವವರೊಂದಿಗೆ ಪ್ರೀತಿಯ ನಡವಳಿಕೆಗೆ ಹೆಸರಾದವರು. ಸಾಮಾನ್ಯ ಜನರಲ್ಲದೇ ಕಳೆದ ಕೆಲವು ತಿಂಗಳ ಹಿಂದೆ ನಿಧನರಾದ ಡಾ.ಎಸ್.ಎಲ್. ಭೈರಪ್ಪ, ಹಾಲಿ ಮೈಸೂರು ವಾಸಿ, ಕುವೆಂಪು ಭಾಷಾ ಭಾರತಿ ಮಾಜಿ ಅಧ್ಯಕ್ಷ ಡಾ. ಪ್ರಧಾನ ಗುರುದತ್ತ ಸೇರಿದಂತೆ ಹಲವಾರು ಖ್ಯಾತನಾಮರ ಆರೋಗ್ಯದ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ. ಮಧು ಮೇಹ ಚಿಕಿತ್ಸೆ ಕುರಿತ ಅವರ ಹೇಳಿಕೆಯ ಪೂರ್ಣಪಾಠ ಇಲ್ಲಿದೆ.



2ನೆಯ ಬಗೆಯ ಮಧುಮೇಹ ವ್ಯಾಧಿಯನ್ನು ಮತ್ತೆ ಬರದಂತೆ ಆರಾಮವಾಗಿ ವಾಸಿ ಮಾಡಬಹುದು ಎಂದೂ, ಗುಣಪಡಿಸಲಾಗದೆನ್ನಲಾದ 1ನೇ ಬಗೆಯ ಮಧುಮೇಹವನ್ನೂ ಸಂಪೂರ್ಣವಾಗಿ ಗುಣಪಡಿಸುವುದಾಗಿ ಸದ್ದು ಮಾಡುತ್ತಿರುವ ವಿಡಿಯೋ ತುಣುಕುಗಳ ಮಹಾಪೂರವೇ ಫೇಸ್‌ಬುಕ್, ಯೂಟ್ಯೂಬ್ ಮೊದಲಾದ ಸಾಮಾಜಿಕ ಜಾಲತಾಣಗಳಲ್ಲಿ ತುಂಬಿವೆ. ಇದು ನಿಜವೇ ಎಂಬ ಪ್ರಶ್ನೆ ಮಧುಮೇಹಿಗಳನ್ನು ಕಾಡುತ್ತಿದೆ.

ಇಂದಿನ ಸಾಮಾಜಿಕ ಜಾಲತಾಣ ವ್ಯವಸ್ಥೆ ಅಂಥ ಗೊಂದಲವನ್ನು ಸೃಷ್ಟಿಸಿದ್ದು, ಮಧುಮೇಹದಿಂದ ಆರೋಗ್ಯರಕ್ಷಣೆಗಾಗಿ ಅವೈಜ್ಞಾನಿಕ ಹಾದಿಯತ್ತ ಜನರು ಸಾಗುತ್ತಿರುವುದು ಇನ್ನಷ್ಟು ಸಮಸ್ಯೆಗಳ ಸೃಷ್ಟಿಗೆ ಕಾರಣವಾಗಬಹುದು.

ಇಂಥ ಹುಸಿ ವಿಜ್ಞಾನ ಪ್ರಚಾರಕರು ತಮ್ಮ ಸ್ವಂತ ಲಾಭಕ್ಕಾಗಿ ಸಮಾಜದ ಹಲವು ಅಮಾಯಕರನ್ನು ಮರಳು ಮಾಡುತ್ತಿರುವುದನ್ನು ತಿರಸ್ಕರಿಸಬೇಕು. ಈಗ ಮಧುಮೇಹ ನಿವಾರಣೆ ಮಾಡುವ ಅಥವಾ ಉಪಶಮನ ಮಾಡುವ ತತ್ವಗಳಲ್ಲಿರುವ ಸತ್ಯಾಂಶಗಳೇನು? ಎಂಬುದನ್ನು ನೋಡಬೇಕು.

ಸುಮಾರು ಶೇ. 50 ರಷ್ಟು ಮಧುಮೇಹಿಗಳು ವ್ಯಾಧಿ ಬಂದ ಹತ್ತು ವರ್ಷಗಳ ಅವಧಿಯಲ್ಲಿ ಮಧುಮೇಹ ನಿಯಂತ್ರಣಕ್ಕಾಗಿ ಇನ್ಸುಲಿನ್ ತೆಗೆದುಕೊಳ್ಳುವ ಆವಶ್ಯಕತೆ ಒದಗಿ ಬರುವುದುಂಟು. ದೇಶದಲ್ಲಿ ಶೇ.51.7 ರಷ್ಟು ಜನರಲ್ಲಿ ಮಧುಮೇಹ ಇದ್ದರೂ ಪರೀಕ್ಷೆಗೊಳಗಾಗದವರು ಸಾಕಷ್ಟು ಇದ್ದಾರೆ. ಮಧುಮೇಹದಲ್ಲಿ ದೇಶ ಎರಡನೇ ಸ್ಥಾನದಲ್ಲಿದೆ. ದೇಶದಲ್ಲಿ ಮಧುಮೇಹ ಅಧಿಕವಾಗಿ ಹರಡುತ್ತಿರುವುದಕ್ಕೆ ಜನರು ತಮ್ಮ ದೇಹಕ್ಕೆ ಬೇಕಾಗುವುದಕ್ಕಿಂತಲೂ ಅಧಿಕ ಪ್ರಮಾಣದಲ್ಲಿ ಕಾರ್ಬೋಹೈಡ್ರೇಟ್‌ಗಳು ಎಂದರೇ ಪಿಷ್ಟ ಪದಾರ್ಥಗಳನ್ನು, ಅದರಲ್ಲೂ ನಾರಿಲ್ಲದ, ಸರಳವಾಗಿ ಬೇಗನೆ ಜೀರ್ಣವಾಗುವ ಪಾಲಿಷ್ ಅಕ್ಕಿ, ಹೊಟ್ಟು ತೆಗೆದಿರುವ ಗೋಧಿ ಪದಾರ್ಥಗಳನ್ನು ಸೇವಿಸುವುದೇ ಕಾರಣ.

ಮಧುಮೇಹಗ್ರಸ್ತ ವ್ಯಕ್ತಿಯು ಎಲ್ಲಿಯವರೆಗೂ ಮಧುಮೇಹವಿಲ್ಲದ ರೀತಿಯಲ್ಲಿ ಹಲವು ಎಚ್ಚರಿಕೆಯ ಕ್ರಮಗಳನ್ನು ಅನುಸರಿಸುತ್ತಿರುತ್ತಾನೋ ಅಲ್ಲಿಯವರೆಗೆ ದೇಹದಲ್ಲಿ ಮಧುಮೇಹ ಇರುವುದಿಲ್ಲ. ಅಮೇರಿಕನ್ ಡಯಾಬಿಟೀಸ್ ಅಸೋಸಿಯೇಷನ್‌ನವರು ಅಂತಾರಾಷ್ಟ್ರೀಯ ಮಧುಮೇಹ ಪರಿಣಿತರ ಸಮಾವೇಶದಲ್ಲಿ ಮಧುಮೇಹ ಉಪಶಮನವನ್ನು ಮೂರು ರೀತಿಯಲ್ಲಿ ಸೂಚಿಸಿದ್ದಾರೆ.

ಭಾಗಶಃ ಉಪಶಮನಃ ಮಧುಮೇಹ ಔಷಧಿ ಸೇವಿಸದೆ, ರಕ್ತದಲ್ಲಿನ ಗ್ಲುಕೋಸ್ ಮಟ್ಟ ಮೂರು ತಿಂಗಳಿನ ಸರಾಸರಿ ಅಂಶದಲ್ಲಿ ಪ್ರತಿಶತ 6.5ಕ್ಕಿಂತಲೂ ಕಡಿಮೆ ಇರುವುದು. ಸಂಪೂರ್ಣ ಉಪಶಮನಃ ಒಂದು ವರ್ಷದಲ್ಲಿ ರಕ್ತದಲ್ಲಿ ಉಫವಾಸ ಕಾಲದ ಸಕ್ಕರೆಯ ಅಂಶ ಪ್ರತಿ ಡೆಸಿಲೀಟರ್‌ಗೆ 100 ಮಿಲಿ ಗ್ರಾಂ ಪ್ರಮಾಣದಲ್ಲಿರುವುದು ಹಾಗೂ ರಕ್ತದಲ್ಲಿನ ಗ್ಲುಕೋಸ್ ಮಟ್ಟ ಶೇ.6.5 ಕ್ಕಿಂತಲೂ ಕಡಿಮೆ ಇರುವುದು. ಸುದೀರ್ಘ ಉಪಶಮನಃ ಐದು ವರ್ಷ ಕಳೆದರೂ ರಕ್ತದಲ್ಲಿನ ಗ್ಲುಕೋಸ್ ಮಟ್ಟ ಶೇ.6.5 ಕ್ಕಿಂತಲೂ ಕಡಿಮೆ ಇರುವುದು ಹಾಗೂ ಉಪವಾಸದ ವೇಳೆ ಸಕ್ಕರೆ ಅಂಶ 100 ಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿರುವುದು.

ಎಷ್ಟೇ ಅವಿಷ್ಕಾರಗಳು ನಡೆದಿದ್ದರೂ ಮಧುಮೇಹವನ್ನು ಹತೋಟಿಯಲ್ಲಿಡುವ ವಿಚಾರದಲ್ಲಿ ನಿರ್ದಿಷ್ಟವಾದ ಅಥವಾ ಸಮಾಧಾನಕರವಾದ ವಿಧಾನ ಇದುವರೆಗೆ ಸ್ಪಷ್ಟವಾಗಿ ಕಂಡು ಬಂದಿಲ್ಲ. ಔಷಧಿ ಉಪಯೋಗಿಸುವುದರಿಂದ ಮೊದಮೊದಲು ಮಧುಮೇಹ ನಿಯಂತ್ರದಣಲ್ಲಿದೆ ಎಂದು ಕಂಡು ಬಂದರೂ ಕಾಲಕ್ರಮೇಣ ಹೆಚ್ಚು ಮಾತ್ರೆ ಉಪಯೋಗಿಸುವ ಪರಿಸ್ಥಿತಿ ಉಂಟಾಗಿ ಕೊನೆಗೆ ಇನ್ಸುಲಿನ್ ತೆಗೆದುಕೊಳ್ಳುವ ಪರಿಸ್ಥಿತಿ ಬರುವುದು ದಿಟ. ಮಧುಮೇಹ ಚಿಕಿತ್ಸೆಯಿಂದ ನಿಯಂತ್ರಣದಲ್ಲಿಡಬಹುದೇ ಹೊರತು ವಾಸಿ ಮಾಡಲಾಗದು.

ಮಧುಮೇಹ ಔಷಧಿಗಳನ್ನು ಜೀವನಪರ್ಯಂತ ಉಪಯೋಗಿಸುವುದರಿಂದ ಅಡ್ಡ ಪರಿಣಾಮ, ಖರ್ಚು ವೆಚ್ಚ ಕುರಿತು ಯೋಚಿಸುವವರು ಈ ತೊಂದರೆಯಿಂದ ದೂರ ಇರಲು ಬಯಸುವುದು ಸಹಜ. ಈ ದೃಷ್ಟಿಕೋನಕ್ಕನುಗುಣವಾಗಿ ಇತ್ತೀಚೆಗೆ ಮಧುಮೇಹ ಚಿಕಿತ್ಸೆ ವಿಚಾರದಲ್ಲಿ ಸಾಕಷ್ಟು ಬದಲಾವಣೆಗಳಾಗುತ್ತಿವೆ. ಮಧುಮೇಹವನ್ನು ಸಂಪೂರ್ಣವಾಗಿ ವಾಸಿ ಮಾಡುವ ಪ್ರಯತ್ನಗಳು ತೀವ್ರವಾಗಿ ನಡೆಯುತ್ತಿವೆವೆ. ಹೊಸ ಪುರಾವೆಗಳಿಂದ ತಿಳಿದು ಬಂದಿರುವುದು ಎಂದರೇ ಎರಡನೇ ನಮೂನೆಯ ಮಧುಮೇಹ ಉಪಶಮನ ಮಾಡಬಹುದು. ಆದರೆ ಅದು ದೀರ್ಘಕಾಲ ಉಪಶಮನದಲ್ಲಿಯೇ ಇರುತ್ತದೆ ಎಂಬುದಕ್ಕೆ ಸಾಕ್ಷಿ ಆಧಾರಗಳಿಲ್ಲ.

ರಕ್ತದಲ್ಲಿನ ಗ್ಲುಕೋಸ್ ಮಟ್ಟ ಹೆಚ್ಚಾಗಿರುವವರು, ದೇಹದ ತೂಕ ಹೆಚ್ಚಾಗಿರುವವರು, ಶರೀರರದಲ್ಲಿ ಇನ್ಸುಲಿನ್ ಇರುವವರು, ಎಂಟು ವರ್ಷಗಳಿಗಿಂತಲೂ ಕಡಿಮೆ ಅವಧಿಯವರೆಗೆ ಮಧುಮೇಹಿಗಳಾಗಿರುವವರು, ಉತ್ಸಾಹ ಇರುವವರು ಹಾಗೂ ಕಾಲಕಾಲಕ್ಕೆ ಮಧುಮೇಹ ನಿಯಂತ್ರಣ ಮುಂದುವರಿಸಿಕೊಂಡು ಹೋಗುವವರಿಗೆ ಮಧುಮೇಹ ಉಪಶಮನ ಮಾಡಬಹುದು ಎನ್ನುತ್ತಾರೆ ಡಾ.ವಿ. ಲಕ್ಷ್ಮೀನಾರಾಯಣ್.